ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವ

# ಸುತ್ತೂರು ವಾರ್ತೆ

ಖಾಸಗಿ ಪ್ರಸಾರ ಸಂಪುಟ : 13 ಸಂಚಿಕೆ : 7 ಪುಟ 8 | ಸುತ್ತೂರು ಶ್ರೀಕ್ಷೇತ್ರ | ಗುರುವಾರ, 7 ಫೆಬ್ರವರಿ 2019



ಅನ್ನ ದೇವರ ಮುಂದೆ... ಬ್ರಹ್ಮೋತ್ಸವ

## ಜಾತ್ರೆಗೆ ಸಂಭ್ರಮದ ತೆರೆ

**ಪರಮಪೂಜ್ಯ ಜಗದ್ಗುರು ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಹಾಗೂ ನಾಡಿನ ವಿವಿಧ ಮಠಾಧೀಶರ ಸಮ್ಮುಖದಲ್ಲಿ, ಹರ ಗುರು ಚರಮೂರ್ತಿಗಳ ಉಪಸ್ಥಿತಿಯಲ್ಲಿ ಫೆಬ್ರವರಿ 1 ರಿಂದ 6 ರವರೆಗೆ ಜರುಗಿದ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವ ಯೋಗಿಗಳವರ ಜಾತ್ರಾ ಮಹೋತ್ಸವವು ಉತ್ಸವಮೂರ್ತಿಯನ್ನು ಕರ್ತೃಗದ್ದುಗೆ ಯಿಂದ ಬುಧವಾರ ಸಂಜೆ ಶ್ರೀಮಠಕ್ಕೆ ಬಿಜಂಗೈಸುವ ಮೂಲಕ ಸಂಪನ್ನಗೊಂಡಿತು.**

ಜಾತ್ರಾ ಮಹೋತ್ಸವದಲ್ಲಿ ನಡೆದ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ನಾಡಿನ ಧಾರ್ಮಿಕ ಗುರುಗಳು, ವಿದೇಶಿ ಗಣ್ಯರೂ ಸೇರಿದಂತೆ ರಾಜ್ಯದ ಮುಖ್ಯಮಂತ್ರಿಗಳು, ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಚಿವರು, ಶಾಸಕರು, ಕಲಾವಿದರು ಮೊದಲಾದವರು ಪಾಲ್ಗೊಂಡಿದ್ದರು.

ಫೆಬ್ರವರಿ 1ರಂದು ಮಹಾ ಸಂಕಲ್ಪ ಪೂರ್ವಕ ಮಹಾರುದ್ರಾಭಿಷೇಕ ಮಾಡುವುದರಿಂದ ಪ್ರಾರಂಭವಾದ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಫೆಬ್ರವರಿ 2ರಂದು ಬೆಳಗ್ಗೆ 10.45ಕ್ಕೆ ಸಹಸ್ರ ಕುಂಭೋತ್ಸವ (ಹಾಲ್ಹರವಿ ಉತ್ಸವ), ಫೆ.3ರಂದು ಬೆಳಗ್ಗೆ 10.55ಕ್ಕೆ ಮಹಾ ರಥೋತ್ಸವ, ಫೆ.4ರಂದು ಸಂಜೆ 6.30ಕ್ಕೆ ಮಹದೇಶ್ವರ ಕೊಂಡೋತ್ಸವ, ರಾತ್ರಿ 8.30ಕ್ಕೆ ಲಕ್ಷದೀಪೋತ್ಸವ, ರಾತ್ರಿ 9.30ಕ್ಕೆ ಶ್ರೀ ಮಹದೇಶ್ವರರ ಮುತ್ತಿನ ಪಲ್ಲಕ್ಕಿ ಉತ್ಸವ, ಗುರು ಬ್ರಹ್ಮೋತ್ಸವ ಮತ್ತು ಜಂಗಮೋತ್ಸವ, ಫೆ.5ರಂದು ಸಂಜೆ 6.30ಕ್ಕೆ ಶ್ರೀ ವೀರಭದ್ರೇಶ್ವರ ಕೊಂಡೋತ್ಸವ, ರಾತ್ರಿ 9.00ಕ್ಕೆ ತೆಪ್ಪೋತ್ಸವ, ಬಾಣ ಬಿರುಸುಗಳ ಪ್ರದರ್ಶನ, ಫೆ.6ರಂದು ಮಧ್ಯಾಹ್ನ 12.10ಕ್ಕೆ ಅನ್ನಬ್ರಹ್ಮೋತ್ಸವ ಕಾರ್ಯಕ್ರಮಗಳು ಜರುಗಿದವು.

ಜಾತ್ರಾ ಮಹೋತ್ಸವದ ಅಂಗವಾಗಿ ಫೆ.2ರಂದು ನಡೆದ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಈ ಬಾರಿ 182 ಜೋಡಿಗಳು ದಾಂಪತ್ಯ ಜೀವನಕ್ಕೆ ಕಾಲಿರಿಸಿದರು. ವಧುವಿಗೆ ಸೀರೆ, ಕುಪ್ಪಸ, ಕಾಲುಂಗುರ ಹಾಗೂ ಮಾಂಗಲ್ಯ, ವರನಿಗೆ ಪಂಚೆ, ವಲ್ಲಿ ಹಾಗೂ ಷರ್ಟು ನೀಡಲಾಯಿತು.

ಸಾಂಸ್ಕೃತಿಕ ಮೇಳವು ಫೆ.1 ರಂದು ಉದ್ಘಾಟನೆಗೊಂಡು ಫೆ. 5ರವರೆಗೆ ವಿವಿಧ ವೇದಿಕೆಗಳಾದ ಗದ್ದುಗೆ ಹಾಗೂ ವಸ್ತುಪ್ರದರ್ಶನ ಆವರಣದಲ್ಲಿ ನೂರಾರು ಸಾಂಸ್ಕೃತಿಕ ಕಾರ್ಯಕ್ರಮಗಳು ಅನಾವರಣಗೊಂಡವು. ಪ್ರತಿ ರಾತ್ರಿ ನಾಟಕಗಳು ಹಿರಿಯರ ಮನೆ ಆವರಣ, ಶ್ರೀ ಸಿದ್ದನಂಜ ದೇಶಿಕೇಂದ್ರ ಮಂಗಳಮಂಟಪ ಮತ್ತು ಸ.ಹಿ.ಪ್ರಾ.ಶಾಲೆ ಪಕ್ಕದ ಆವರಣದಲ್ಲಿ ರಂಗಾಸಕ್ತರ ಕಣ್ಮನ ತಣಿಸಿದವು.

ವಸ್ತುಪ್ರದರ್ಶನವು ಫೆ. 1ರಂದು ಉದ್ಘಾಟನೆಗೊಂಡು ಆರು ದಿನಗಳ ಕಾಲ ಜನರನ್ನು ತನ್ನತ್ತ ಆಕರ್ಷಿಸಿತು. ಈ ವಸ್ತುಪ್ರದರ್ಶನದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಸಂಸ್ಥೆಗಳ ವತಿಯಿಂದ ಕೃಷಿ, ವಿಜ್ಞಾನ, ತಾಂತ್ರಿಕತೆ, ಶಿಕ್ಷಣ, ಆರೋಗ್ಯ ಮತ್ತು ಚಿತ್ರಕಲೆಗಳ ಬಗ್ಗೆ ಪ್ರದರ್ಶನ **7ನೇ ಪುಟಕ್ಕೆ**

## ಆಲಸ್ಯ ಬಿಡಿ... ನಿಷ್ಠೆಯಿಂದ ದುಡಿ...



ಕೃಷಿ ಮೇಳ ಮತ್ತು ವಸ್ತುಪ್ರದರ್ಶನ ಸಮಾರೋಪ ಸಮಾರಂಭದ ಸಮ್ಮುಖ ವಹಿಸಿದ್ದ ಮೈಸೂರಿನ ಶ್ರೀರಾಮಕೃಷ್ಣಮಠದ ಅಧ್ಯಕ್ಷರಾದ **ಶ್ರೀ ಸ್ವಾಮಿ ಆತ್ಮಜ್ಞಾನಂದ ಮಹಾರಾಜ್‌ರವರು** ತಮ್ಮ ಶುಭಸಂದೇಶದಲ್ಲಿ ಬಹಳ ವರ್ಷದಿಂದ ಈ ಜಾತ್ರೆಯನ್ನು ನೋಡುತ್ತಿದ್ದೇನೆ. ಪ್ರತಿ ವರ್ಷವೂ ಕೂಡ ಬಹಳ ವೈವಿಧ್ಯತೆಯಿಂದ ಜಾತ್ರೆ ನಡೆಯುತ್ತಿದೆ. ಆಲಸ್ಯವನ್ನು ಬಿಟ್ಟು ನಮ್ಮ ಜೀವನದ ಮೌಲ್ಯಗಳ ಹಾಗೂ ಬೆಳವಣಿಗೆಯ ಕಡೆಗೆ ಗಮನಹರಿಸಬೇಕು ಹಾಗೂ ಜೀವನದಲ್ಲಿ ಉನ್ನತವಾದುದನ್ನು ಸಾಧಿಸುವುದು ಪ್ರಮುಖ ಧ್ಯೇಯವಾಗಬೇಕು. ನಮ್ಮನ್ನು ನಾವು ಉದ್ಧರಿಸಿಕೊಳ್ಳಬೇಕೆಂಬ ಭಾವನೆ ನಮಗೆಲ್ಲರಿಗೂ ಇರಬೇಕೇ ಹೊರತು ಬೇರೆಯವರು ಬಂದು ನಮ್ಮನ್ನು ಕಾಪಾಡುತ್ತಾರೆಂದು ಕಾಯಬಾರದು ಎಂದರು.

ದೇಶಕ್ಕಾಗಿ ಏನಾದರೂ ಒಳ್ಳೆಯದು ಮಾಡಲು ನಾವೆಲ್ಲರೂ ಶ್ರಮಿಸಬೇಕು. ಭಾರತೀಯರಲ್ಲಿ ಇರುವ ದೊಡ್ಡ ದೋಷವೆಂದರೆ ಅಸೂಯೆ, ಅದನ್ನು ಮೊದಲು ಬಿಡಬೇಕು, ಮಕ್ಕಳ ಮನಸ್ಸಿನಿಂದ ಭೇದ ಭಾವವನ್ನು ತೆಗೆದುಹಾಕಿ ಒಳ್ಳೆಯ ರೀತಿಯಲ್ಲಿ ಬೆಳೆಸಬೇಕು. ಅವರಿಗೆ ಸುಂದರವಾದ ಜೀವನವನ್ನು ಕಲ್ಪಿಸಿಕೊಡಬೇಕು. ಈ ಎಲ್ಲಾ ಉದ್ದೇಶದಿಂದ ಸುತ್ತೂರು ಜಾತ್ರೆಯಲ್ಲಿ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಇದರಿಂದ ಭಾರತೀಯ ಪರಂಪರೆಯ ಅರಿವನ್ನು ಮೂಡಿಸುವುದಕ್ಕೆ ಸಾಧ್ಯವಾಗಿದೆ ಎಂದು ಹೇಳಿದರು.

ಜಾತ್ರೆಯಲ್ಲಿನ ಕೃಷಿಮೇಳದ ಮಾಹಿತಿಗಳಿಂದ ರೈತರಿಗೆ ಅರಿವು ಉಂಟಾಗುತ್ತಿದೆ. ಇಲ್ಲಿ ಪಡೆದ ಮಾಹಿತಿಯನ್ನು ಅಳವಡಿಸಿಕೊಂಡು ಅವರು ಅಭಿವೃದ್ಧಿ ಸಾಧಿಸಲು ಸಹಾಯಕವಾಗುತ್ತದೆ ಎಂದು ಹೇಳಿದರು. –ಕು. ಸಿ. ಕೆ. ಸುನಿತ



ಕಪಿಲಾನದಿ ತೀರದಲ್ಲಿ ಆದಿಜಗದ್ಗುರುಗಳವರ ಉತ್ಸವಮೂರ್ತಿಗೆ ಮಹಾರುದ್ರಾಭಿಷೇಕ ನೆರವೇರಿತು

**ಶರಣು ಗುರುವೆ...**
**ಓ ಕಲ್ಪತರುವೆ...**
**ನಾ ಹೋಗಿ ಬರುವೆ...**



### ನಿಮ್ಮಲ್ಲಿ ಅಪರೂಪದ ವಸ್ತುಗಳಿವೆಯೇ ?

**ಮಣ್ಣು, ಮರ ಮತ್ತು ಲೋಹಗಳಿಂದ ತಯಾರಿಸಿದ ಅಪರೂಪದ ಯಾವುದೇ ಹಳೆಯ ವಸ್ತುಗಳು ನಿಮ್ಮಲ್ಲಿದ್ದರೆ ಅವುಗಳನ್ನು ಸುತ್ತೂರು ವಸ್ತುಸಂಗ್ರಹಾಲಯಕ್ಕೆ ನೀಡಬಹುದು**



ಪೂಜ್ಯ ಶ್ರೀಗಳವರಿಂದ ಬಹುಮಾನ ಸ್ವೀಕರಿಸುತ್ತಿರುವ ವಸ್ತುಪ್ರದರ್ಶನದ ಪ್ರದರ್ಶಕರು

## ಶ್ರೀ ಸಾಮಾನ್ಯನ ಪಾಲಿನ ಏಣಿ...



ಕೃಷಿ ಮೇಳ ಮತ್ತು ವಸ್ತುಪ್ರದರ್ಶನ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಬೆಂಗಳೂರಿನ ಪ್ರಾದೇಶಿಕ ಜನ ಸಂಪರ್ಕ ಕಾರ್ಯಾಲಯದ ಹೆಚ್ಚುವರಿ ಮಹಾನಿರ್ದೇಶಕರಾದ **ಶ್ರೀ ಎಂ. ನಾಗೇಂದ್ರಸ್ವಾಮಿಯವರು** ಮಾತನಾಡುತ್ತಾ, ನಾನು ಜೆಎಸ್‌ಎಸ್ ಸಂಸ್ಥೆಯ ಹಳೆಯ ವಿದ್ಯಾರ್ಥಿ. ವೇದಿಕೆಯ ಮುಂದೆ ಜನ ಸಾಮಾನ್ಯನಾಗಿ ಕೂರುತ್ತಿದ್ದ ನನ್ನನ್ನು ಇಂದು ವೇದಿಕೆಯ ಮೇಲೆ ನಿಂತು ಮಾತನಾಡುವ ಹಂತಕ್ಕೆ ಬೆಳೆಸಿದ್ದು ಜೆಎಸ್‌ಎಸ್ ಸಂಸ್ಥೆ. ಸುತ್ತೂರು ಜಾತ್ರೆ ಕೇವಲ ಮನೋರಂಜನೆ ಮಾತ್ರವಲ್ಲದೇ ಸಾರ್ವಜನಿಕರಿಗೆ ತಿಳುವಳಿಕೆಯನ್ನು ನೀಡುತ್ತಿದೆ. ಹಾಗೆಯೇ ಮುಂದಿನ ವರ್ಷದಿಂದ ವಸ್ತುಪ್ರದರ್ಶನದಲ್ಲಿ ಇಸ್ರೋ ಸಂಸ್ಥೆಯೂ ಸಹ ಭಾಗವಹಿಸುತ್ತದೆ. ಸುತ್ತೂರು ಜಾತ್ರೆಯು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಯೋಜನೆಗಳನ್ನು ಜನರಿಗೆ ಪರಿಚಯಿಸುವ ಕೆಲಸವನ್ನು ಮಾಡುತ್ತಿದೆ ಎಂದು ಹೇಳಿದರು. –ಎಂ. ಹರ್ಷಿತಾ

# ಶಿಸ್ತು ಮಸ್ತು ಜನಮನಗೆದ್ದ ವಸ್ತುಪ್ರದರ್ಶನ



**ಸು**ತ್ತೂರು ಶ್ರೀಕ್ಷೇತ್ರದ ಜಾತ್ರಾ ಮಹೋತ್ಸವವು ಧಾರ್ಮಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಕ್ಷೇತ್ರಗಳ ಸಮ್ಮಿಲನವಾಗಿದ್ದು, ರಾಜ್ಯದ ವಿವಿಧ ಭಾಗಗಳಿಂದ ಹಾಗೂ ಹೊರ ರಾಜ್ಯಗಳಿಂದ ಲಕ್ಷಾಂತರ ಜನರನ್ನು ಆಕರ್ಷಿಸುತ್ತಿದೆ. ಸಾಂಸ್ಕೃತಿಕ ಮೇಳ, ಚಿತ್ರಕಲಾ ಸ್ಪರ್ಧೆ, ಚಿತ್ರಸಂತೆ, ಭಜನಾಮೇಳ, ರಂಗೋಲಿ ಸ್ಪರ್ಧೆ, ಸೋಬಾನೆಪದ ಸ್ಪರ್ಧೆ, ದೇಸಿಯ ಆಟಗಳು, ಗಾಳಿಪಟ ಸ್ಪರ್ಧೆ, ದನಗಳ ಜಾತ್ರೆ, ರಸಪ್ರಶ್ನೆ, ಸಾಮೂಹಿಕ ವಿವಾಹ ಹಾಗೂ ಕುಸ್ತಿ ಪಂದ್ಯಾವಳಿಯಂತಹ ಕಾರ್ಯಕ್ರಮಗಳ ಜೊತೆಗೆ ಆಯೋಜಿಸಿದ್ದ ವಸ್ತುಪ್ರದರ್ಶನವು ವಿಶೇಷವಾಗಿತ್ತು.

ಫೆಬ್ರವರಿ 1 ರಿಂದ 6 ರವರೆಗೆ ಆಯೋಜಿಸಿದ್ದ ಕೃಷಿ, ಕೈಗಾರಿಕೆ, ಆರೋಗ್ಯ, ತಾಂತ್ರಿಕ, ಕರಕುಶಲ, ವಾಣಿಜ್ಯ, ಶೈಕ್ಷಣಿಕ ಮತ್ತು ವಿಜ್ಞಾನ ವಸ್ತುಪ್ರದರ್ಶನವು ಪರಮಪೂಜ್ಯರ ಮತ್ತು ಆದಿಚುಂಚನಗಿರಿ ಶ್ರೀಗಳವರ ದಿವ್ಯಸಾನ್ನಿಧ್ಯದಲ್ಲಿ ಹಾಗೂ ಹರಗುರು ಚರಮೂರ್ತಿಗಳ ಸಮ್ಮುಖದಲ್ಲಿ ಹಾಗೂ ಇತರ ಗಣ್ಯಮಾನ್ಯರ ಉಪಸ್ಥಿತಿಯಲ್ಲಿ ಫೆ. 1ರಂದು ಉದ್ಘಾಟನೆಗೊಂಡಿತು.

ಈ ಬಾರಿ ಏರ್ಪಡಿಸಿದ್ದ ವಿವಿದೋದ್ದೇಶ ವಸ್ತುಪ್ರದರ್ಶನವು ಹಲವು ವಿಶೇಷತೆಗಳಿಂದ ಕೂಡಿತ್ತು. ಒಟ್ಟು 6 ಎಕರೆ ವಿಸ್ತೀರ್ಣದ ಪ್ರದೇಶದಲ್ಲಿ ಉನ್ನತ ವಿನ್ಯಾಸದಲ್ಲಿ ಸಿದ್ಧತೆಗೊಳಿಸಲಾಗಿದ್ದ ವಸ್ತುಪ್ರದರ್ಶನದಲ್ಲಿ 400 ಕ್ಕೂ ಹೆಚ್ಚು ಮಳಿಗೆಗಳನ್ನು ನಿರ್ಮಿಸಲಾಗಿತ್ತು. ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿವಿಧ ಅಭಿವೃದ್ಧಿ ಇಲಾಖೆಗಳು, ಜೆಎಸ್‌ಎಸ್ ಸಂಸ್ಥೆಗಳು ಹಾಗೂ ಇತರ ಸಂಘ ಸಂಸ್ಥೆಗಳೂ ಸೇರಿ ಸುಮಾರು 180 ಪ್ರದರ್ಶನಕಾರರು ಪಾಲ್ಗೊಂಡಿದ್ದರು. ವಿವಿಧ ರೀತಿಯ ವಾಣಿಜ್ಯ ಮಳಿಗೆಗಳವರು ತಮ್ಮ ಉತ್ಪನ್ನಗಳನ್ನು ಹಾಗೂ ಸೇವೆಗಳನ್ನು ಕಾಳಜಿಯಿಂದ ಪ್ರಚುರಪಡಿಸಿದರಲ್ಲದೆ ಲಾಭದಾಯಕ ವಹಿವಾಟನ್ನು ನಡೆಸಿದರು. ಗ್ರಾಮಾಂತರ ಪ್ರದೇಶದಲ್ಲಿ ನಡೆಯುವ ಸುಸಜ್ಜಿತ ವಸ್ತುಪ್ರದರ್ಶನ ಇದಾಗಿದ್ದು, ವೀಕ್ಷಿಸಿದ ಜನರು ಜ್ಞಾನಾರ್ಜನೆ ಹಾಗೂ ಮನೋರಂಜನೆಯನ್ನು ಪಡೆದು ಸಂತುಷ್ಟರಾದರು.

ಜೆಎಸ್‌ಎಸ್ ಆರೋಗ್ಯ ಮತ್ತು ವೈದ್ಯಕೀಯ ಸಂಸ್ಥೆಗಳಾದ ಆಸ್ಪತ್ರೆ, ವೈದ್ಯಕೀಯ, ಆಯುರ್ವೇದ, ಔಷಧ ವಿಜ್ಞಾನ, ದಂತ ವೈದ್ಯಕೀಯ, ನರ್ಸಿಂಗ್ ಶಿಕ್ಷಣ, ಫಿಜಿಯೋಥೆರಪಿ, ವಾಕ್ ಮತ್ತು ಶ್ರವಣ ಹಾಗು ಪ್ರಕೃತಿ ಮತ್ತು ಯೋಗ ವಿಜ್ಞಾನ ಮಹಾವಿದ್ಯಾಲಯಗಳ ಸಂಯುಕ್ತಾಶ್ರಯದಲ್ಲಿ ಆರೋಗ್ಯ ಮತ್ತು ವೈದ್ಯಕೀಯ ವಸ್ತುಪ್ರದರ್ಶನ ಏರ್ಪಡಿಸಲಾಗಿತ್ತು.

ಜೆಎಸ್‌ಎಸ್ ಆಸ್ಪತ್ರೆ ವತಿಯಿಂದ ಸಮಗ್ರ ಆರೋಗ್ಯ ತಪಾಸಣೆ, ವಿವಿಧ ವಿಭಾಗಗಳಲ್ಲಿ ದೊರೆಯುವ ಸೌಲಭ್ಯಗಳು, ಸರ್ಕಾರಿ ಹಾಗೂ ಖಾಸಗಿ ಆರೋಗ್ಯ ವಿಮಾ ಯೋಜನೆಗಳು, ರಕ್ತದಾನ, ದೇಹದಾನ ಮತ್ತು ನೇತ್ರದಾನದ ಬಗ್ಗೆ ಅರಿವು ಮತ್ತು ಜಾಗೃತಿ ಮೂಡಿಸಲು ಚಿತ್ರಪಟ ಮತ್ತು ಕಿರುಚಿತ್ರಗಳ ಮೂಲಕ ಮಾಹಿತಿ ನೀಡಲಾಯಿತು.

ವೈದ್ಯಕೀಯ ಮಹಾವಿದ್ಯಾಲಯದ ವತಿಯಿಂದ ದೇಹದ ವಿವಿಧ ಅಂಗಗಳ ರಚನೆ ಮತ್ತು ಕ್ರಿಯೆ, 30 ವರ್ಷ ಮೇಲ್ಪಟ್ಟವರಿಗೆ ಕೊಬ್ಬಿನಂಶ, HbA1C–ಮಧುಮೇಹಿಗಳಲ್ಲಿ ಸಕ್ಕರೆ ಪ್ರಮಾಣದ ನಿಯಂತ್ರಣ ಪರೀಕ್ಷೆ ಮಾಡಲಾಯಿತು. ಸ್ವಯಂ ಔಷಧಿ ತೆಗೆದುಕೊಳ್ಳುವುದು, ಔಷಧಿಗಳ ಅಡ್ಡ



ಪರಿಣಾಮ ಮತ್ತು ವೈದ್ಯರ ಸಲಹೆಗಳನ್ನು ದಾಖಲಿಸುವ ಬಗ್ಗೆ, ಕ್ಷಯರೋಗ ಪತ್ತೆ ಮತ್ತು ಹೆಚ್‌ಐವಿ ಸೋಂಕಿನ ಪರಿಶೀಲನೆ ಮತ್ತು ಶುಶ್ರೂಷೆ ಬಗ್ಗೆ ಅರಿವು ಮೂಡಿಸಲಾಯಿತು.

ಬೊಜ್ಜು, ರಕ್ತದೊತ್ತಡ, ಮಧುಮೇಹ ರೋಗಿಗಳಿಗೆ ಆಹಾರ, ವ್ಯಾಯಾಮ ಪಿರಮಿಡ್ ಬಳಸಿ ಜೀವನ ಶೈಲಿ ಬದಲಿಸಿಕೊಳ್ಳುವ ಬಗ್ಗೆ, ಸೊಳ್ಳೆಗಳಿಂದ ಹರಡುವ ರೋಗಗಳ ಲಕ್ಷಣಗಳು, ಅವುಗಳ ನಿಯಂತ್ರಣ ಮತ್ತು ತಡೆಗಟ್ಟುವ ಬಗ್ಗೆ ಮತ್ತು ಆಹಾರ ಕಲಬೆರಕೆ ಪತ್ತೆಹಚ್ಚುವ ವಿಧಾನಗಳನ್ನು ಪ್ರಾತ್ಯಕ್ಷಿಕೆಗಳ ಮೂಲಕ ಮಾಹಿತಿ ನೀಡಲಾಯಿತು. ರಾಷ್ಟ್ರೀಯ ಕುಟುಂಬ ಕಲ್ಯಾಣ ಕಾರ್ಯಕ್ರಮಗಳು ಮತ್ತು ಗರ್ಭ ನಿರೋಧಕ ಸಾಧನಗಳ ಬಗ್ಗೆ ಅರಿವು ಮೂಡಿಸಲಾಯಿತು.

ಔಷಧ ವಿಜ್ಞಾನ ಮಹಾವಿದ್ಯಾಲಯದ ವತಿಯಿಂದ ಔಷಧ ಆವಿಷ್ಕಾರ ಮತ್ತು ಸಂಶೋಧನೆ, ಔಷಧಗಳ ವಿವಿಧ ರೂಪಗಳು ಮತ್ತು ತಯಾರಿಸುವ ವಿಧಾನ, ಸಸ್ಯರೂಪದ ಔಷಧಿಗಳು ಮತ್ತು ಅವುಗಳ ಉಪಯೋಗ, ಔಷಧಿಗಳನ್ನು ಪ್ರಾಣಿಗಳಲ್ಲಿ ಪರೀಕ್ಷಿಸಿ ಮನುಷ್ಯರಿಗೆ ಕೊಡುವ/ಉಪಯೋಗಿಸುವ ಬಗ್ಗೆ, ಮಧುಮೇಹ, ರಕ್ತದೊತ್ತಡ, ಅಸ್ತಮಾ, ಟಿಬಿ, ಸಿಜೆಪಿಡಿ, ಪೆಪ್ಟಿಕ್ ಅಲ್ಸರ್ ವಿವಿಧ ಮನೋರೋಗಗಳ ಹಾಗೂ ವಿಶೇಷ ಮಾಹಿತಿ ಕೇಂದ್ರದಿಂದ ಆ್ಯಪ್ ಆಧಾರಿತ ಸೇವೆ ಹಾಗೂ



ವಿಷದಿಂದಾಗುವ ತೊಂದರೆಗಳು, ಪ್ರಥಮ ಚಿಕಿತ್ಸೆ ಬಗ್ಗೆ ಜನರಿಗೆ ಮಾದರಿಗಳು, ಭಿತ್ತಿಪತ್ರಗಳು ಮತ್ತು ಕರಪತ್ರಗಳ ಮೂಲಕ ಮಾಹಿತಿ ನೀಡಿ ಅರಿವು ಮೂಡಿಸಲಾಯಿತು.

ಫಿಜಿಯೋಥೆರಪಿ ಮಹಾವಿದ್ಯಾಲಯದ ವತಿಯಿಂದ ವಯಸ್ಕರು ಮತ್ತು ಹಿರಿಯರಲ್ಲಿ ಕಂಡುಬರುವ ಸಾಮಾನ್ಯ ತೊಂದರೆಗಳಾದ ನರ, ಸ್ನಾಯು ಮತ್ತು ಮೂಳೆಗಳಲ್ಲಿನ ಅಸ್ವಸ್ಥತೆಗಳ ಬಗ್ಗೆ ಅರಿವು ಮೂಡಿಸುವುದರ ಜೊತೆಗೆ ದೈಹಿಕ ಪರೀಕ್ಷೆಯನ್ನು ಮಾಡಲಾಯಿತು ಹಾಗೂ ಕರಪತ್ರಗಳು, ಚಿತ್ರಪಟಗಳು ಮತ್ತು ಮಾದರಿಗಳ ಮೂಲಕ ವಿವರಿಸಲಾಯಿತು.

ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವಿಜ್ಞಾನ ಸಂಸ್ಥೆ ವತಿಯಿಂದ ಯೋಗ ಮತ್ತು ಪ್ರಕೃತಿ ಚಿಕಿತ್ಸೆಯ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು, ಉತ್ತಮ ಜೀವನ ಶೈಲಿ ರೂಪಿಸಿಕೊಳ್ಳುವಲ್ಲಿ ಯೋಗಾಭ್ಯಾಸದ ಮಹತ್ವ, ಆರೋಗ್ಯ ಸ್ವಾವಲಂಬನೆ, ಔಷಧ ರಹಿತ ಉತ್ತಮ ಆರೋಗ್ಯ, ಆಹಾರವೇ ಔಷಧ, ಪ್ರಾಕೃತಿಕ ಆಹಾರ, ಸರ್ವೋತ್ತಮ ಆಹಾರ, ನೀರಗ್ನಿ ಆಹಾರ, ಉಪವಾಸವೇ ಸರ್ವೋತ್ತಮ, ಔಷಧಗಳ ಬಗ್ಗೆ ಮಾಹಿತಿ ಹಾಗೂ ದೈನಂದಿನ ಜೀವನ ಶೈಲಿಯಲ್ಲಿನ ನ್ಯೂನತೆಗಳಿಂದ ಕಂಡುಬರುವ ಕಾಯಿಲೆಗಳನ್ನು ಯೋಗಾಭ್ಯಾಸ ಮತ್ತು ನೈಸರ್ಗಿಕ ಆಹಾರ ಸೇವಿಸುವ ಮೂಲಕ ತಡೆಗಟ್ಟುವ ಹಾಗೂ ಗುಣಪಡಿಸುವ ಬಗ್ಗೆ ಚಿತ್ರಪಟಗಳ ಮತ್ತು ವೀಡಿಯೋ ಮೂಲಕ ಮಾಹಿತಿ ನೀಡಲಾಯಿತು.

ವಾಕ್ ಶ್ರವಣ ಸಂಸ್ಥೆಯ ವತಿಯಿಂದ ಮಕ್ಕಳಲ್ಲಿ ಮಾತು ಮತ್ತು ಭಾಷೆಯ ಬೆಳವಣಿಗೆ, ವಯಸ್ಸಿಗೆ ಅನುಗುಣವಾಗಿ ಮಾತನಾಡದಿರುವುದು, ಕಲಿಕೆಯ ತೊಂದರೆ, ಮಾತನಾಡಲು ಮತ್ತು ಕೇಳಿಸಿಕೊಳ್ಳಲು ಉಪಯೋಗಿಸುವ ಉಪಕರಣಗಳ ಪರಿಚಯ, ಅವುಗಳು ಕಾರ್ಯನಿರ್ವಹಿಸುವ ರೀತಿ ಮತ್ತು ತೊಂದರೆಗಳ ಬಗ್ಗೆ ಹಾಗೂ ಸರ್ಕಾರದ ಯೋಜನೆಗಳ ಬಗ್ಗೆ ಮಾದರಿ ಮತ್ತು ಕರಪತ್ರಗಳ ಮೂಲಕ ಮಾಹಿತಿಗಳನ್ನು ನೀಡಲಾಯಿತು.

5ನೇ ಪುಟಕ್ಕೆ







ಬುಧವಾರ ಮುಂಜಾನೆ ಬಸವಟ್ಟಿಗೆ ಗ್ರಾಮದಲ್ಲಿ ಜರುಗಿದ ಪಥಸಂಚಲನ



ಬುಧವಾರ ಮುಂಜಾನೆ ಬಸವಟ್ಟಿಗೆ ಗ್ರಾಮದಲ್ಲಿ ಜರುಗಿದ ಪ್ರಾರ್ಥನಾ ಪಥಸಂಚಲನ

# ಜಾಗೃತಿ ಮೂಡಿಸಿದ ಸ್ನೇಹ-ಸೌಹಾರ್ದ-ಶಾಂತಿ ಪ್ರಾರ್ಥನಾ ಪಥಸಂಚಲನ

## ● ನಿ.ಪ್ರ.ಸ್ವ. ಶ್ರೀ ಇಮ್ಮಡಿ ಚೀಲಾಳ ದೇಶಿಕೇಂದ್ರ ಮಹಾಸ್ವಾಮಿಗಳು

ಜಾತ್ರಾ ಮಹೋತ್ಸವದ ಅಂಗವಾಗಿ ಬುಧವಾರ ಮುಂಜಾನೆ ನಂಜನಗೂಡು ತಾಲ್ಲೂಕಿನ ಬಸವಟ್ಟಿಗೆ ಗ್ರಾಮದಲ್ಲಿ ಸ್ನೇಹ-ಸೌಹಾರ್ದ-ಶಾಂತಿ ಪ್ರಾರ್ಥನಾ ಪಥಸಂಚಲನ ಕಾರ್ಯಕ್ರಮವನ್ನು ಶ್ರದ್ಧಾಭಕ್ತಿಯಿಂದ ನೆರವೇರಿಸಲಾಯಿತು. ಊರಿನ ಪ್ರಮುಖ ಬೀದಿಗಳಲ್ಲಿ ಸುತ್ತೂರು ಶಾಲಾ ಮಕ್ಕಳ ಪಥಸಂಚಲನದೊಂದಿಗೆ ಆದಿಜಗದ್ಗುರು ಶೀ ಶಿವರಾತ್ರೀಶ್ವರ ಶಿವಯೋಗಿಗಳವರ ಉತ್ಸವಮೂರ್ತಿಯನ್ನು ವಿಜೃಂಭಣೆಯಿಂದ ಮೆರವಣಿಗೆ ಮಾಡಲಾಯಿತು.

ಹೆಚ್.ಡಿ.ಕೋಟೆ ತಾಲ್ಲೂಕಿನ ನಂಜೂಪುರದ ಶ್ರೀ ವಿರಕ್ತ ಮಠದ ನಿ.ಪ್ರ.ಸ್ವ ಶ್ರೀ ಇಮ್ಮಡಿ ಚೀಲಾಳ ದೇಶಿಕೇಂದ್ರ ಮಹಾಸ್ವಾಮಿಗಳವರು ಷಟ್‌ಸ್ಥಲ ಧ್ವಜಾರೋಹಣವನ್ನು ನೆರವೇರಿಸಿ ಆಶೀರ್ವಚನ ನೀಡಿ, ಆಡುಮುಟ್ಟದ ಸೊಪ್ಪಿಲ್ಲ ಎಂಬಂತೆ ಸುತ್ತೂರು ಶ್ರೀಕ್ಷೇತ್ರ ಕೈಗೊಳ್ಳದೆ ಇರುವ ಸಾಮಾಜಿಕ ಕಾರ್ಯಗಳಿಲ್ಲ. ಷಟ್‌ಸ್ಥಲವು ವೀರಶೈವ ಧರ್ಮದಲ್ಲಿ ಮುಖ್ಯಪಾತ್ರವನ್ನು ವಹಿಸುತ್ತದೆ. ಪ್ರತಿಯೊಂದು ಶುಭಕಾರ್ಯಗಳನ್ನು ಆರಂಭಿಸುವ ಮುನ್ನ ಷಟ್‌ಸ್ಥಲ ಧ್ವಜಾರೋಹಣವನ್ನು ನೆರವೇರಿಸಲಾಗುತ್ತದೆ. ಇಂದು ಈ ಕ್ಷೇತ್ರವು ವಿಶ್ವವ್ಯಾಪಿಯಾಗಿ ಬೆಳೆಯಲು ಸುತ್ತೂರು ಶ್ರೀ ಗುರುಪರಂಪರೆಯ ತಪೋಶಕ್ತಿಯೇ ಕಾರಣವಾಗಿದೆ. ಧರ್ಮಚಿಂತನೆ, ಶಿವಚಿಂತನೆಯನ್ನು ಪ್ರತಿಯೊಬ್ಬರು ಮಾಡಬೇಕು ಎಂದು ನುಡಿದರು.

ಟಿ. ನರಸೀಪುರ ತಾಲ್ಲೂಕು ಬೆನಕನಹಳ್ಳಿಯ ಶ್ರೀಪಟ್ಟದ ಮಠದ ಷ.ಬ.ಶ್ರೀ ಮಹದೇವಸ್ವಾಮಿಗಳವರು ಕಾರ್ಯಕ್ರಮದಲ್ಲಿ ಧರ್ಮಸಂದೇಶವನ್ನು ನೀಡುತ್ತಾ ಲಿಂಗಧಾರಣೆ ಪಾವಿತ್ರ್ಯತೆ, ವಿಭೂತಿ, ರುದ್ರಾಕ್ಷಿಗಳ ಮಹತ್ವವನ್ನು ಮನದಟ್ಟು ಮಾಡಿದರು. ಲಿಂಗಧರಿಸಿದ ವ್ಯಕ್ತಿಯು ಗುರುವಿನ ಬಳಿ ಭಸ್ಮವನ್ನು ಪಡೆಯುವುದರ ಮೂಲಕ ಲಿಂಗಾರಾಧನೆ ಮಾಡಬೇಕು. ಒಮ್ಮೆ ಲಿಂಗಧಾರಣೆ ಮಾಡಿದ ಮೇಲೆ ಮತ್ತೆ ತೆಗೆಯಬಾರದು. ಲಿಂಗವನ್ನು ಲಿಂಗೈಕ್ಯರಾಗುವ ತನಕ ತಮ್ಮ ಜೊತೆಯಲ್ಲಿರಿಸಿಕೊಂಡು ಪೂಜೆ ಮಾಡಬೇಕು ಎಂದು ನುಡಿದರು. -ಪಿ. ಸುಮ, ಕೆ.ಎಸ್. ತೇಜಶ್ರೀ



ಬುಧವಾರ ಮುಂಜಾನೆ ಬಸವಟ್ಟಿಗೆ ಗ್ರಾಮದಲ್ಲಿ ಜರುಗಿದ ಷಟ್‌ಸ್ಥಲ ಧ್ವಜಾರೋಹಣ



# ನೃತ್ಯದ ಮೂಲಕ ಜನರ ಮನಗೆದ್ದ ವಿದ್ಯಾರ್ಥಿಗಳು

ಸುತ್ತೂರು ಜಾತ್ರಾ ಮಹೋತ್ಸವದ ಅಂತಿಮ ದಿನವಾದ ಇಂದು ಯಕ್ಷಗಾನ, ಭರತನಾಟ್ಯ, ಕೋಲಾಟ, ನೃತ್ಯಗಳನ್ನು 250 ತಂಡಗಳು ವಸ್ತುಪ್ರದರ್ಶನ ಆವರಣದಲ್ಲಿ ಪ್ರದರ್ಶಿಸಿದರು. ಅದರಲ್ಲಿ ಜನಮೆಚ್ಚುಗೆ ಪಡೆದ 25 ತಂಡಗಳನ್ನು ಆಯ್ಕೆಮಾಡಿ ಸಾಂಸ್ಕೃತಿಕ ತಿರುಳು ಕಾರ್ಯಕ್ರಮದಲ್ಲಿ ಪ್ರದರ್ಶನ ನೀಡಿದರು.

ಇದರಲ್ಲಿ ಚಾಮರಾಜನಗರದ ಜೆಎಸ್‌ಎಸ್ ಪ್ರೌಢ ಶಾಲೆಯ ವಿದ್ಯಾರ್ಥಿಗಳು ಶ್ರೀ ಮಲೆಮಹದೇಶ್ವರರ ಹಾಡಿಗೆ ನೃತ್ಯ ಮಾಡಿ ಜನರನ್ನು ಭಕ್ತಿಲೋಕಕ್ಕೆ ಕರೆದೊಯ್ದರು. ಸುತ್ತೂರು ಜೆಎಸ್‌ಎಸ್ ಪ್ರೌಢಶಾಲೆಯ ವಿದ್ಯಾರ್ಥಿಗಳು ಜನಪದ ನೃತ್ಯಕ್ಕೆ ಹೆಜ್ಜೆಹಾಕಿ ಜನರ ಮೆಚ್ಚುಗೆ ಪಡೆದರು. ಗೌಡಹಳ್ಳಿಯ ಪ್ರೌಢಶಾಲೆಯ ವಿದ್ಯಾರ್ಥಿನಿಯರು ಐಗಿರಿ ನಂದಿನಿ ಎಂಬ ಸಾಂಪ್ರದಾಯಿಕ ಹಾಡಿಗೆ ಹೆಜ್ಜೆ ಹಾಕಿದರು. ನೃತ್ಯಮಾಡಿದ ಚಾಮರಾಜನಗರ ಜೆಎಸ್‌ಎಸ್ ಪ್ರೌಢಶಾಲೆಯ ರಂಜಿತಾ ಮತ್ತು ತಂಡದವರು ಜನಪದ ನೃತ್ಯಕ್ಕೆ ಹೆಜ್ಜೆಹಾಕಿ ಸತತವಾಗಿ ಎರಡು ವರ್ಷದಿಂದ ಭಾಗವಹಿಸುತ್ತಾ ಬಂದಿದ್ದು ಈ ಬಾರಿ 4ನೇ ಸ್ಥಾನವನ್ನು ಪಡೆದಿರುವುದು ಸಂತೋಷವಾಗಿದೆ ಎಂದು ತಮ್ಮ ಅನಿಸಿಕೆಯನ್ನು ಹಂಚಿಕೊಂಡರು. ಸರಗೂರಿನ ಜೆಎಸ್‌ಎಸ್ ಪ್ರೌಢಶಾಲೆಯ ವಿದ್ಯಾರ್ಥಿಗಳು ಸತತವಾಗಿ ಮೂರು ವರ್ಷಗಳಿಂದ ವಿವಿಧ ರೀತಿಯ ನೃತ್ಯಗಳನ್ನು ಪ್ರದರ್ಶಿಸುತ್ತಿದ್ದು, ಈ ಬಾರಿ ವಿಶೇಷವಾಗಿ ಯಕ್ಷಗಾನ ನೃತ್ಯವನ್ನು ಪ್ರದರ್ಶಿಸಿರುವುದು ನಮಗೆ ತುಂಬಾ ಖುಷಿಯಾಗಿದೆ ಎಂದರು. ಈ ವರ್ಷದ ಜಾತ್ರಾ ಮಹೋತ್ಸವದಲ್ಲಿ ವೈವಿಧ್ಯಮಯ ನೃತ್ಯಗಳನ್ನು ಶಾಲಾಕಾಲೇಜುಗಳ ವಿದ್ಯಾರ್ಥಿಗಳು ಪ್ರದರ್ಶಿಸಿದರು. ಏಕವ್ಯಕ್ತಿ ನೃತ್ಯ, ಸಾಮೂಹಿಕ ನೃತ್ಯ ಹೀಗೆ ವಿವಿಧ ಬಗೆಯ ನೃತ್ಯಗಳನ್ನು ವಿದ್ಯಾರ್ಥಿಗಳು ಸಾಂಸ್ಕೃತಿಕ ತಿರುಳು ಕಾರ್ಯಕ್ರಮದಲ್ಲಿ ಪ್ರದರ್ಶಿಸುವ ಮೂಲಕ ಪ್ರೇಕ್ಷಕರ ಮನಸೂರೆಗೊಂಡರು. -ಸ್ವಾತಿ .ಯು, ಹರ್ಷಿತಾ .ಎಂ

# 'ಪಂಚಸೂತ್ರ' ಪಾಲನೆಯ ಪಾತ್ರ



## ● ಡಾ. ಸಿ.ಜೆ. ಬೆಟಸೂರಮಠ

ಕೃಷಿ ಮೇಳ ಮತ್ತು ವಸ್ತುಪ್ರದರ್ಶನ ಸಮಾರೋಪ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಜೆಎಸ್ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜೆ. ಬೆಟಸೂರಮಠರವರು ಮಾತನಾಡುತ್ತಾ, ಶ್ರೀಮಠವು ಶತಶತಮಾನಗಳಿಂದ ಧಾರ್ಮಿಕ, ಆಧ್ಯಾತ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲದೆ ಜ್ಞಾನ ಮತ್ತು ಅನ್ನ ದಾಸೋಹವನ್ನು ನೀಡಿ ಜನರ ಬದುಕಿಗೆ ಆಶಾಕಿರಣವಾಗಿದೆ. ಲಕ್ಷಾಂತರ ಮಂದಿ ಭಾಗಿಯಾಗುವ ಸುತ್ತೂರು ಜಾತ್ರೆಯು ಎರಡನೇ ನಾಡಹಬ್ಬವಿದ್ದಂತೆ. ರಾಜ್ಯದ ಮೂಲೆ ಮೂಲೆಗಳಿಂದ ಭಕ್ತರು ಆಗಮಿಸಿ ಶ್ರೀಗಳವರ ಆಶೀರ್ವಾದವನ್ನು ಪಡೆದುಕೊಳ್ಳುತ್ತಾರೆ. ಹಾಗೆಯೇ ಜಾತ್ರಾ ಮಹೋತ್ಸವದ ಮೂರ್ನಾಲ್ಕು ತಿಂಗಳ ಪೂರ್ವ ಸಿದ್ಧತೆಯ ಫಲ ಇಂದು ಯಶಸ್ವಿ ಕಂಡಿದೆ. ಈ ಜಾತ್ರಾ ಮಹೋತ್ಸವದಲ್ಲಿ ಸ್ವಚ್ಛತೆಗೆ ಮೊದಲ ಆದ್ಯತೆ ನೀಡಿದ್ದು, ಈ ಬಾರಿ ಪ್ಲಾಸ್ಟಿಕ್ ನಿಷೇದಕ್ಕೆ ಒತ್ತು ನೀಡಿರುವುದು ತುಂಬಾ ಅರ್ಥಪೂರ್ಣವಾಗಿದ್ದು, ಸ್ವಚ್ಛಭಾರತ ಆಂದೋಲನದಲ್ಲಿ ಪ್ರತಿಯೊಬ್ಬರು ಭಾಗಿಯಾಗಬೇಕು. ಆಗ ಮಾತ್ರ ದೇಶವನ್ನು ಸ್ವಚ್ಛಗೊಳಿಸಲು ಸಾಧ್ಯ. ಈ ನಿಟ್ಟಿನಲ್ಲಿ ಜೆಎಸ್ಎಸ್ ಮಹಾವಿದ್ಯಾಪೀಠವು ಇಂಧನ ಉಳಿತಾಯ, ಜಲ ಉಳಿತಾಯ, ಆಹಾರವನ್ನು ವ್ಯರ್ಥಮಾಡುವುದನ್ನು ತಡೆಗಟ್ಟುವುದು, ಸ್ವಚ್ಛತೆ, ಪ್ಲಾಸ್ಟಿಕ್ ಮುಕ್ತವಾಗಿಸಲು ಪಂಚಸೂತ್ರ ಕಾರ್ಯಕ್ರಮಗಳನ್ನು ಕೈಗೊಳ್ಳುವ ಮೂಲಕ ಜನರಿಗೆ ಮಾದರಿಯಾಗಿದೆ. ಜಾತ್ರಾಮಹೋತ್ಸವದಲ್ಲಿ ವಸ್ತುಪ್ರದರ್ಶನ, ದನಗಳ ಜಾತ್ರೆ, ಸಾಮೂಹಿಕ ವಿವಾಹ, ಕೃಷಿ ಮೇಳ ಎಲ್ಲವೂ ಆಕರ್ಷಣೀಯವಾಗಿದೆ ಎಂದು ಹೇಳಿದರು.

– ಮಂದಾರ, ಚಂದನ

# ಶಿಸ್ತಿನಿಂದ ಜವಾಬ್ದಾರಿ ನಿರ್ವಹಿಸಿದ ಸ್ವಯಂ ಸೇವಕರು



ಎಲ್ಲಾ ದಾನಕ್ಕಿಂತ ಅನ್ನದಾನ ಮೇಲು ಎಂಬುದು ಎಲ್ಲರಿಗೂ ತಿಳಿದ ವಿಚಾರ. ರಾಜ್ಯದ ಮಠಮಾನ್ಯಗಳು ಕಾಯಕ ಮತ್ತು ದಾಸೋಹಕ್ಕೆ ಹೆಚ್ಚಿನ ಮಹತ್ವವನ್ನು ನೀಡುತ್ತಾ ಬಂದಿವೆ. ಅಂತಹ ಮಠಗಳಲ್ಲಿ ಒಂದಾದ ಸುತ್ತೂರು ಶ್ರೀಮಠವು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕವಾಗಿ ಪ್ರಗತಿಯನ್ನು ಸಾಧಿಸಿದೆ. ಪ್ರತಿವರ್ಷವು ಸುತ್ತೂರು ಶ್ರೀ ಕ್ಷೇತ್ರದಲ್ಲಿ ಆರು ದಿನಗಳ ಕಾಲ ಜಾತ್ರಾ ಮಹೋತ್ಸವ ಬಹಳ ಅರ್ಥಪೂರ್ಣವಾಗಿ ನಡೆಯುತ್ತದೆ. ಎಲ್ಲ ದಿನಗಳು ಜಾತ್ರೆಗೆ ಆಗಮಿಸುವ ಭಕ್ತಾದಿಗಳಿಗೆ ಬೆಳಗ್ಗೆ ಮಧ್ಯಾಹ್ನ ಮತ್ತು ರಾತ್ರಿ ಅಚ್ಚುಕಟ್ಟಾದ ತಿಂಡಿ ಊಟದ ವ್ಯವಸ್ಥೆ ಇರುತ್ತದೆ. ಅದರಂತೆ ವಸ್ತುಪ್ರದರ್ಶನದ ಆವರಣದಲ್ಲಿ ಪ್ರತಿ ವರ್ಷದಂತೆ ವೇದಿಕೆಯ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ, ಮಳಿಗೆಗಳ ಮುಖ್ಯಸ್ಥರಿಗೆ, ಕಾರ್ಯಕರ್ತರಿಗೆ ಪ್ರಸಾದದ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ. ಪ್ರಸಾದ ವಿತರಣಾ ಕಾರ್ಯವನ್ನು ಮೈಸೂರಿನ ಊಟಿ ರಸ್ತೆಯ ಜೆಎಸ್ಎಸ್ ಕಾಲೇಜಿನ 40 ರಾಷ್ಟ್ರೀಯ ಸ್ವಯಂ ಸೇವಾ ಯೋಜನೆಯ ವಿದ್ಯಾರ್ಥಿಗಳು, ಎಂ.ಎಸ್.ಡಬ್ಲ್ಯೂನ 30 ವಿದ್ಯಾರ್ಥಿಗಳು ಮತ್ತು ಇದರ ಉಸ್ತುವಾರಿಯನ್ನು ಶ್ರೀ ಎನ್. ಸಂತೋಷ್‌ಕುಮಾರ್ ವಹಿಸಿಕೊಂಡಿದ್ದರು. ಇಲ್ಲಿ ಪ್ರತಿ ದಿನ ಬೆಳಗಿನ ಉಪಹಾರ, ಮಧ್ಯಾಹ್ನದ ಭೋಜನ ಮತ್ತು ರಾತ್ರಿ ಊಟದ ವ್ಯವಸ್ಥೆಯನ್ನು ಕಲ್ಪಿಸಲಾಗಿತ್ತು. ಕುಡಿಯುವ ನೀರು ಮತ್ತು ಸ್ವಚ್ಛತೆ ಕಡೆಗೆ ಹೆಚ್ಚಿನ ಗಮನ ನೀಡಲಾಗಿತ್ತು. ಸುಮಾರು 12 ಸಾವಿರಕ್ಕೂ ಹೆಚ್ಚು ಮಂದಿ ಪ್ರಸಾದ ಸ್ವೀಕರಿಸಿರುತ್ತಾರೆ. ಈ ವ್ಯವಸ್ಥೆಯಿಂದ ಸ್ವಯಂ ಸೇವಕರಿಗೆ ಸೌಹಾರ್ದತೆ, ಸಂವಹನ ಕೌಶಲ್ಯದ ಜೊತೆಗೆ ತಾವೆಲ್ಲಾ ಒಂದೇ ಎಂಬ ಭಾವನೆ ಮೂಡುತ್ತಿದೆ. ಮುಂದಿನ ಜೀವನಕ್ಕೆ ಇದು ದಾರಿದೀಪವಾಗಿದೆ. ಆಹಾರ ವಿತರಣೆಯ ಜವಾಬ್ದಾರಿಯನ್ನು ಊಟಿರಸ್ತೆಯ ಜೆಎಸ್ಎಸ್ ಕಾಲೇಜಿನ ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ಶ್ರೀ ಎಂ.ಪಿ ಸೋಮಶೇಖರ್, ಚಾಮರಾಜನಗರದ ರುಡ್‌ಸೆಟ್‌ನ ಸಂಯೋಜಕರಾದ ಶ್ರೀ ಚಿನ್ನಸ್ವಾಮಿ ಮತ್ತು ಮೈಸೂರು ಜೆ.ಸಿ ಕಾಲೇಜಿನ ಶ್ರೀ ಶಂಕರ್‌ರವರು ಮೇಲ್ವಿಚಾರಣೆ ವಹಿಸಿದ್ದರು. –ವಿ. ಪ್ರಿಯದರ್ಶಿನಿ



**ಮಂಗಳವಾರ ರಾತ್ರಿ ಮೈಸೂರು ತಾಲ್ಲೂಕಿನ ಎಸ್. ಉತ್ತನಹಳ್ಳಿ ಶ್ರೀ ಪ್ರಸನ್ನ ಶನೇಶ್ವರ ಸ್ವಾಮಿ ಭಕ್ತ ಕಲಾಮಂಡಳಿಯ ಕಲಾವಿದರು ಅಭಿನಯಿಸಿದ ಸಂಪೂರ್ಣ ರಾಮಾಯಣ ನಾಟಕದ ಒಂದು ಆಕರ್ಷಕ ದೃಶ್ಯ.**


# ಜಾತ್ರೆಯೊಳಗೊಂದು ಸುತ್ತು...

## ಮಠದಿಂದ ಮಗನ ಭವಿಷ್ಯ



ನಾನು ಕಳೆದ ಐದು ವರ್ಷಗಳಿಂದ ಜಾತ್ರೆಗೆ ಬರುತ್ತಿದ್ದೇನೆ. ನನ್ನ ಮಗನೂ ಸಹ ಸುತ್ತೂರು ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದಾನೆ. ವಿದ್ಯೆ, ದಾಸೋಹ ಹಾಗೂ ವಸತಿ ವ್ಯವಸ್ಥೆಯನ್ನು ಕಲ್ಪಿಸಿ ತುಂಬಾ ಚೆನ್ನಾಗಿ ನೋಡಿಕೊಳ್ಳುತ್ತಿದ್ದಾರೆ. ಬಡವರಾದ ನಾವು ನನ್ನ ಮಗನಿಗೆ ವಿದ್ಯಾಭ್ಯಾಸ ಮಾಡಿಸಲು ಶ್ರೀಮಠವು ಆಶೀರ್ವಾದ ಮಾಡಿದೆ. ಅದಕ್ಕಾಗಿ ನಾನು ಕೃತಜ್ಞಳಾಗಿದ್ದೇನೆ. –**ಶ್ರೀಮತಿ ಮೀನಾಕ್ಷಿ,** ಯಾದಗಿರಿ

## ನಮ್ಮ ಕುಟುಂಬದ ಯಾತ್ರೆ ಸುತ್ತೂರು ಜಾತ್ರೆ



ಕಳೆದ ಎರಡು ವರ್ಷಗಳಿಂದ ಜಾತ್ರೆಗೆ ಬರುತ್ತಿದ್ದೇವೆ. ಇಲ್ಲಿನ ಪ್ರಸಾದ, ವಸತಿ ಎಲ್ಲವೂ ವ್ಯವಸ್ಥಿತವಾಗಿದೆ. ಉತ್ತರ ಕರ್ನಾಟಕದಲ್ಲಿ ನಡೆಯುವ ಎಲ್ಲಾ ಜಾತ್ರೆಗಳಿಗಿಂತಲೂ ಸುತ್ತೂರು ಜಾತ್ರೆ ವಿಶಿಷ್ಟವಾಗಿದೆ. ಈ ವರ್ಷದ ಪ್ರವಾಸವನ್ನು ಸುತ್ತೂರು ಜಾತ್ರೆಯಲ್ಲಿ ನಾವೆಲ್ಲರೂ ಸಂತೋಷದಿಂದ ಕಳೆದಿದ್ದೇವೆ. – **ಶ್ರೀ ದೇವೇಂದ್ರಪ್ಪ,** ಯಾದಗಿರಿ

## ಬಡವರಬಂಧು ಶ್ರೀಗಳು



ಈ ಜಾತ್ರೆಗೆ ಸಾಗರೋಪಾದಿಯಲ್ಲಿ ಬರುವ ಜನರನ್ನು ಕಂಡು ಅಚ್ಚರಿಯಾಯಿತು. ಶ್ರೀಗಳು ಅನೇಕ ಬಡಮಕ್ಕಳಿಗೆ ಶಿಕ್ಷಣ, ವಸತಿ ನೀಡುವ ಮೂಲಕ ಬಡವರ ಬಂಧು ಆಗಿದ್ದಾರೆ.

– **ಲಲಿತಾ,** ಹುಬ್ಬಳ್ಳಿ

## ವೈಜ್ಞಾನಿಕ ಮತ್ತು ವೈಚಾರಿಕ ಜಾಗೃತಿಯ ಜಾತ್ರೆ



ಸುತ್ತೂರು ವಾರ್ತೆಯ ಸುದ್ದಿಗಳನ್ನು ನಾನು ದಿನ ಓದುತ್ತಿದ್ದು, ಜಾತ್ರೆಯನ್ನು ನೋಡಲೇಬೇಕೆಂದು ಬಂದಿದ್ದೇನೆ. ವೈಜ್ಞಾನಿಕ ಮತ್ತು ವೈಚಾರಿಕ ಜಾಗೃತಿ ಮೂಡಿಸುವ ಹಲವಾರು ಮಾಹಿತಿಗಳ ಪ್ರತೀಕವೇ ಈ ಜಾತ್ರೆಯಾಗಿದೆ.

– **ಸಂತೋಷ್,** ಗುಂಡ್ಲುಪೇಟೆ

## ನಿರಾಶ್ರಿತ ಮಕ್ಕಳಿಗೆ ಆಶ್ರಯದಾತರು




ಮೊದಲ ಬಾರಿಗೆ ಜಾತ್ರೆಗೆ ಬಂದಿದ್ದೇನೆ. ಜಾತ್ರೆಯಲ್ಲಿ ಮೇಘಾಲಯ ಮಕ್ಕಳನ್ನು ನೋಡಿ ಅಚ್ಚರಿಯಾಯಿತು ನಂತರ ವಿಷಯ ತಿಳಿದಾಗ ಶ್ರೀಗಳು ಸುನಾಮಿ ಹಾಗು ಇನ್ನಿತರ ಪ್ರಕೃತಿ ವಿಕೋಪದ ಸಂದರ್ಭದಲ್ಲಿ ಅಲ್ಲಿನ ಮಕ್ಕಳನ್ನು ಕರೆತಂದು ನಿರಾಶ್ರಿತ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸ ನೀಡುತ್ತಿರುವುದು ಗಮನಾರ್ಹ ವಿಷಯ. ಶ್ರೀಗಳ ಸಮಾಜಮುಖಿ ಕಾರ್ಯಗಳನ್ನು ನಾವು ಆದರ್ಶವಾಗಿರಿಸಿಕೊಳ್ಳಬೇಕು – **ಕಾವ್ಯ,** ಚಾಮರಾಜನಗರ

## ಉನ್ನತ ವ್ಯಾಸಂಗಕ್ಕೆ ಸ್ಫೂರ್ತಿ ಕೃಷಿಮೇಳ



ನಾನು ಸುತ್ತೂರಿಗೆ ಮೊದಲ ಬಾರಿಗೆ ಬಂದಿದ್ದೇನೆ. ಇಲ್ಲಿನ ಕೃಷಿ ಮೇಳದ ಬಗ್ಗೆ ಕೇಳಿದ್ದೆ, ಈಗ ಅದನ್ನು ನೋಡಿ, ಹಲವಾರು ತಳಿಗಳ ಪರಿಚಯವಾಯಿತು. ನನ್ನ ಉನ್ನತ ವ್ಯಾಸಂಗಕ್ಕೆ ಇದು ಸ್ಫೂರ್ತಿಯಾಗಿದೆ. – **ಡಾಲೌಜಿ,** ಮಣಿಪುರ್

## ಜಾತ್ರೆಯ ಪ್ರಯೋಜನ ಎಲ್ಲರೂ ಪಡೆಯಲಿ



ಸುತ್ತೂರು ಶ್ರೀಕ್ಷೇತ್ರವು ನನಗೆ ಹಿಂದಿನಿಂದಲೂ ಪರಿಚಯವಿತ್ತು. ಆದರೆ ಶ್ರೀಕ್ಷೇತ್ರಕ್ಕೆ ಬಂದಿರಲಿಲ್ಲ, ಈಗ ಜಾತ್ರೆಗೆ ಎಂದು ಬಂದಿದ್ದೇನೆ. ಜಾತ್ರೆಯು ಎಲ್ಲಾ ರೀತಿಯ ವೈವಿಧ್ಯಮಯ ವಿಚಾರಗಳನ್ನು ಒಳಗೊಂಡಿದೆ. ದನಗಳ ಜಾತ್ರೆ, ಕೃಷಿ ಮೇಳ, ದೇಸಿ ಆಟಗಳು ಹೀಗೆ ಹಲವು ವಿವಿಧ ವಿಚಾರಗಳು ಇಲ್ಲಿ ದೊರೆಯುತ್ತವೆ. ಇದರ ಪ್ರಯೋಜನವನ್ನು ಸಾರ್ವಜನಿಕರು ಮತ್ತು ರೈತರು ಪಡೆಯುತ್ತಾರೆ ಎಂಬುದು ನನ್ನ ಅಭಿಲಾಷೆಯಾಗಿದೆ. ಅದಕ್ಕಾಗಿ ಪೂಜ್ಯ ಶ್ರೀಗಳವರಿಗೆ ಹಾಗೂ ಸುತ್ತೂರು ಶ್ರೀಕ್ಷೇತ್ರಕ್ಕೆ ಆಭಾರಿಯಾಗಿದ್ದೇನೆ.

– **ಶ್ರೀ ಪ್ರೇಮ್‌ಶೇಖರ್,** ಮುಂಬೈ (ಆದರ್ಶ್, ಶುಭಶ್ರೀ, ವಿ. ಪ್ರಿಯದರ್ಶಿನಿ)




ಪೂಜ್ಯರು ಹಾಗೂ ಗಣ್ಯರೊಂದಿಗೆ ಬಹುಮಾನ ವಿಜೇತರಾದ ಕಲಾವಿದರು

# ಶಿಸ್ತು ಮಸ್ತು ಜನಮನಗೆದ್ದ ವಸ್ತುಪ್ರದರ್ಶನ

(2ನೇ ಪುಟದಿಂದ)

ಜೆಎಸ್ಎಸ್ ತಾಂತ್ರಿಕ ಶಿಕ್ಷಣ ಸಂಸ್ಥೆಗಳಾದ ಜೆಎಸ್ಎಸ್ ವಿಜ್ಞಾನ ಮತ್ತು ತಾಂತ್ರಿಕ ವಿಶ್ವವಿದ್ಯಾನಿಲಯ, ವಿಶೇಷಚೇತನರ ಪಾಲಿಟೆಕ್ನಿಕ್, ಮಹಿಳಾ ಪಾಲಿಟೆಕ್ನಿಕ್‌ಗಳ ಸಂಯುಕ್ತಾಶ್ರಯದಲ್ಲಿ ತಾಂತ್ರಿಕ ವಸ್ತುಪ್ರದರ್ಶನ ಏರ್ಪಡಿಸಲಾಗಿತ್ತು. ಈ ವಸ್ತುಪ್ರದರ್ಶನ ದಲ್ಲಿ ಜೆಎಸ್ಎಸ್ ವಿಜ್ಞಾನ ಮತ್ತು ತಾಂತ್ರಿಕ ವಿಶ್ವವಿದ್ಯಾ ನಿಲಯದ ವತಿಯಿಂದ Hand Gesture ಬಳಸಿ ವೀಡಿಯೋ ಮತ್ತು ವೀಲ್‌ಚೇರ್ ನಿಯಂತ್ರಿಸುವುದು, ಧ್ವನಿ ನಿಯಂತ್ರಿತ ರೋಬೋಟ್ ಕಾರು, ಸ್ವಯಂಚಾಲಿತ ಸ್ಯಾನಿಟರಿ ಪ್ಯಾಡ್ ವಿತರಣಾ ಯಂತ್ರ, ಗೃಹಬಳಕೆಯ ರೋಬೋಟ್ ಮಾದರಿ, ಪರಿಸರ ಸ್ನೇಹಿ ಶೌಚಾಲಯ, ಸ್ವಯಂಚಾಲಿತ ಗೃಹ ನಿರ್ವಹಣೆ ಬಗ್ಗೆ ಮಾದರಿಗಳ ಮೂಲಕ, ಕಿರುಚಿತ್ರಗಳ ಮೂಲಕ ಹಾಗೂ ಕರಪತ್ರಗಳ ಮೂಲಕ ವಿವರಿಸಲಾಯಿತು.

ವಿಶೇಷಚೇತನರಿಗೆ ತಾಂತ್ರಿಕ ಶಿಕ್ಷಣ ನೀಡಲು ರಾಷ್ಟ್ರದ ಲ್ಲಿಯೇ ಮೊದಲ ಬಾರಿಗೆ ಸ್ಥಾಪಿಸಲ್ಪಟ್ಟ ವಿಶೇಷಚೇತನರ ಪಾಲಿಟೆಕ್ನಿಕ್ ವತಿಯಿಂದ ವಿದ್ಯಾರ್ಥಿಗಳು ತಯಾರಿಸಿದ ತಂತ್ರಾಂಶ, ಆಧುನಿಕ ತಂತ್ರಜ್ಞಾನವನ್ನೊಳಗೊಂಡ ಮಾದರಿ ಗಳು, ಪಾರಂಪರಿಕ/ ಆಧುನಿಕ ಚಿನ್ನಾಭರಣಗಳ ಬಳಕೆ, ಆಭರಣ ವಿನ್ಯಾಸ ಮತ್ತು ತಂತ್ರಜ್ಞಾನ ವಿಭಾಗದಲ್ಲಿ ತಯಾರಿಸ ಲ್ಪಟ್ಟ ಮಾದರಿ ಆಭರಣಗಳ ಪ್ರದರ್ಶನ ಹಾಗೂ ಮಾರಾಟ ಸಂಸ್ಥೆಯಲ್ಲಿ ವಿಶೇಷಚೇತನ ಮಕ್ಕಳು ತಾಂತ್ರಿಕ ಶಿಕ್ಷಣವನ್ನು ಪಡೆಯುವುದರ ಬಗ್ಗೆ ಅರಿವು/ಜಾಗೃತಿಯನ್ನು ಮೂಡಿಸಲಾ ಯಿತು.

ಜೆಎಸ್ಎಸ್ ಮಹಿಳಾ ಪಾಲಿಟೆಕ್ನಿಕ್ ವತಿಯಿಂದ ಆಧುನಿಕ ತಂತ್ರಜ್ಞಾನವನ್ನೊಳಗೊಂಡ ಮಾದರಿಗಳು, ನವೀನ ಉಡುಪು ಗಳು ಹಾಗೂ ವಸ್ತ್ರವಿನ್ಯಾಸಗಳನ್ನು ಪ್ರದರ್ಶಿಸಿದರು.

ಜೆಎಸ್ಎಸ್ ಕಾನೂನು ಕಾಲೇಜಿನ ವತಿಯಿಂದ ಮತ ದಾನದ ಹಕ್ಕು, ಮಾಹಿತಿ ಹಕ್ಕು ಕಾಯಿದೆ ಮತ್ತು ವರದಕ್ಷಿಣೆ ಕಿರುಕುಳದ ಉಚಿತ ಕಾನೂನು ಸಲಹೆ ಬಗ್ಗೆ ಮಾಹಿತಿ ನೀಡಲಾಯಿತು.

ರಾಜ್ಯ ಸರ್ಕಾರದ ಇಲಾಖೆಗಳಾದ ಸಾರ್ವಜನಿಕ ಶಿಕ್ಷಣ ಇಲಾಖೆ, ವಾರ್ತಾ ಮತ್ತು ಪ್ರಚಾರ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗಳಿಂದ ಕೈಗೊಂಡಿರುವ ವಿವಿಧ ಜನಪರ ಕಾರ್ಯಕ್ರಮಗಳ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡಿದರು. ರಾಜ್ಯ ಮದ್ಯಪಾನ ಸಂಯಮ ಮಂಡಳಿಯವರು ಮದ್ಯಪಾನದಿಂದಾಗುವ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸಿದರು.

ಕೇಂದ್ರ ಸರ್ಕಾರದ ಇಲಾಖೆಗಳಾದ ಫ್ಯಾಮಿಲಿ ಪ್ಲ್ಯಾನಿಂಗ್ ಅಸೋಸಿಯೇಷನ್ ಆಫ್ ಇಂಡಿಯಾರವರು ಇಲಾಖಾ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಿದರು. ಕೇಂದ್ರೀಯ ಪ್ಲಾಸ್ಟಿಕ್ ತಂತ್ರಜ್ಞಾನ ಸಂಸ್ಥೆಯವರು, ಕೌಶಲ್ಯ ಅಭಿವೃದ್ಧಿ ಯೋಜನೆಯಡಿ ಹಮ್ಮಿಕೊಳ್ಳುವ ವಿವಿಧ ವೃತ್ತಿಪರ ತರಬೇತಿ ಕಾರ್ಯಕ್ರಮದ ಬಗ್ಗೆ ಮಾಹಿತಿ ನೀಡಿದರು. ಭಾರತೀಯ ಅಂಚೆ ಇಲಾಖೆಯವರು ಗ್ರಾಮೀಣ ಜನರಿಗೆ ಅಂಚೆ ಇಲಾಖೆ ಯಲ್ಲಿರುವ ವಿವಿಧ ಯೋಜನೆಗಳು, ಅಂಚೆ ಚೀಟಿಗಳ ಸಂಗ್ರಹ ಮತ್ತು ಮಾರಾಟ ಹಾಗೂ ಎಲ್ಲಾ ಅಂಚೆ ಉತ್ಪನ್ನಗಳ ಮಾಹಿತಿ ನೀಡಿರುತ್ತಾರೆ. ಕ್ಷೇತ್ರ ಕಾರ್ಯಾಲಯ ಮೈಸೂರು, ವಾರ್ತಾ ಮತ್ತು ಪ್ರಸಾರ ಸಚಿವಾಲಯದವರು ಕೇಂದ್ರ ಸರ್ಕಾರ ರೂಪಿಸಿರುವ ಜನೋಪಯೋಗಿ ಯೋಜನೆಗಳ ಬಗ್ಗೆ ಮಾಹಿತಿ ಯನ್ನು ಕರಪತ್ರ, ಕಿರುಚಿತ್ರ ಇತರೆ ಪ್ರಚಾರ ಸಾಮಗ್ರಿಗಳ ಮೂಲಕ ಮಾಹಿತಿ ನೀಡಿದರು.

ವಾರ್ತಾ ಮತ್ತು ಪ್ರಸಾರ ಸಚಿವಾಲಯದ ಪ್ರಾದೇಶಿಕ ಜನಸಂಪರ್ಕ ಕಾರ್ಯಾಲಯದವರು ಆಯೋಜಿಸಿರುವ ಮಹಾತ್ಮಗಾಂಧಿಯವರ 150ನೇ ಜನ್ಮವರ್ಷಾಚರಣೆ ಸಂದರ್ಭ ದಲ್ಲಿ ಮಹಾತ್ಮ ಗಾಂಧೀಜಿಯವರ ಅಪರೂಪದ ಚಿತ್ರಪ್ರದರ್ಶನ ಈ ಸಾಲಿನ ವಿಶೇಷತೆಯಾಗಿದೆ.

ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ, ಖಾದಿ ಮತ್ತು ಗ್ರಾಮೋದ್ಯೋಗ ಹಾಗೂ ಜವಳಿ ಮತ್ತು ಕೈಮಗ್ಗ ಇಲಾಖೆ ಪ್ರಾಯೋಜಿತ ಮಳಿಗೆಗಳು ವಿವಿಧ ಬಗೆಯ ಗೃಹೋಪಯೋಗಿ ವಸ್ತುಗಳು, ಉಪಕರಣಗಳು, ಮಣ್ಣಿನಿಂದ/ಮರದಿಂದ ಮಾಡಿದ ಗೃಹೋಪಯೋಗಿ ಮತ್ತು ಅಲಂಕಾರಿಕ ವಸ್ತುಗಳು, ಕೈಮಗ್ಗದಲ್ಲಿ ಹತ್ತಿಯಿಂದ ತಯಾರಿಸಿದ ಬಟ್ಟೆ, ಸೀರೆ, ಪಂಚೆ, ಟವಲ್, ರೇಷ್ಮೆ ಬಟ್ಟೆಗಳ ಪ್ರದರ್ಶನ ಹಾಗೂ ಮಾರಾಟ ಏರ್ಪಡಿಸ ಲಾಗಿತ್ತು. ರಾಜ್ಯದ ವಿವಿಧ ಜಿಲ್ಲೆಗಳಿಂದ ಗುಡಿ ಕೈಗಾರಿಕೆಗಳು ಸಹಕಾರ ಸಂಘಗಳು/ಸಂಸ್ಥೆಗಳು ಹಾಗೂ ವಿವಿಧ ಕರಕುಶಲ ಘಟಕಗಳು ಭಾಗವಹಿಸಿ ತಮ್ಮ ಉತ್ಪನ್ನಗಳನ್ನು ಪ್ರಚಾರಪಡಿಸು ವುದರ ಜೊತೆಗೆ ಲಾಭದಾಯಕ ವಹಿವಾಟು ನಡೆಸಿದರು.

ಮಕ್ಕಳಿಗಂತೂ ಇನ್ನಿಲ್ಲದ ಆಸಕ್ತಿ ಕೆರಳಿಸಿದ್ದ ಜೆಎಸ್ಎಸ್ ಶಿಕ್ಷಣ ಸಂಸ್ಥೆಗಳ ಶಾಲಾ ವಿದ್ಯಾರ್ಥಿಗಳು ಅತ್ಯಂತ ಆಸಕ್ತಿ ಯಿಂದ ಏರ್ಪಡಿಸಿದ್ದ ಶೈಕ್ಷಣಿಕ ವಸ್ತುಪ್ರದರ್ಶನದಲ್ಲಿ 75 ಶಿಕ್ಷಕರ ಮಾರ್ಗದರ್ಶನದಲ್ಲಿ 400ಕ್ಕೂ ಹೆಚ್ಚು ವಿದ್ಯಾರ್ಥಿಗಳ 200 ಮಾದರಿಗಳು ಪ್ರದರ್ಶನಗೊಂಡಿದ್ದವು.

ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ಸಂಸ್ಥೆಯವರು "ಶಿವಜ್ಞಾನದರ್ಶನ ವಿಶ್ವ ಪರಿವರ್ತನ ದರ್ಶನ" ಎಂಬ ತಾತ್ವಿಕ (ಪರಿಕಲ್ಪನೆ) ಅಡಿಯಲ್ಲಿ 18 ಅಡಿ ಎತ್ತರದ ಶಿವಲಿಂಗದ ಮಹಾದರ್ಶನ ಏರ್ಪಡಿಸಿದ್ದರು ಹಾಗೂ ಆರೋಗ್ಯ ದರ್ಶನ ಮತ್ತು ಅನ್ನದೇವ ಕೃಷಿಕ ಜೀವನ ದರ್ಶನದ ಬಗ್ಗೆ ಮಾಹಿತಿ ನೀಡಿದರು.




ವಸ್ತುಪ್ರದರ್ಶನದ ಆವರಣದಲ್ಲಿ ನಡೆದ ರಾಜ್ಯ ಮಟ್ಟದ ಚಿತ್ರಸಂತೆಯಲ್ಲಿ ರಾಜ್ಯದಲ್ಲಿನ ಚಿತ್ರಕಲಾವಿದರನ್ನು ಒಂದೇ

(6ನೇ ಪುಟಕ್ಕೆ)

# ಪ್ರಶಸ್ತಿ ಪಡೆದ ಪ್ರದರ್ಶಕರು ಹಾಗೂ ಸಂಸ್ಥೆಗಳು

ವಸ್ತುಪ್ರದರ್ಶನದಲ್ಲಿ ಆರು ದಿನಗಳ ಕಾಲ ಉಪಯುಕ್ತ ಮಾಹಿತಿಗಳುಳ್ಳ ಪ್ರದರ್ಶನ ಹಾಗೂ ದಿನಬಳಕೆ ವಸ್ತುಗಳ ಮಾರಾಟ ಮಾಡುವ ಮೂಲಕ ಜನರ ಗಮನ ಸೆಳೆದ ಪ್ರದರ್ಶಕರು ಹಾಗೂ ಸಂಸ್ಥೆಗಳಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.



ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ ವಿಭಾಗದಲ್ಲಿ ರಸಭರಿತವಾದ ತಾಜ ಹಣ್ಣಿನ ರಸವನ್ನು ಸಾರ್ವಜನಿಕರಿಗೆ ನೀಡಿ ಮನಸೂರೆಗೊಂಡ ಹಂಸ ಮ್ಯಾಂಗೋ ಜ್ಯೂಸ್ ಸೆಂಟರ್‌ರವರಿಗೆ ಪ್ರಥಮ ಬಹುಮಾನ ನೀಡಲಾಯಿತು. ಶಿವ ರೆಡಿಮೇಡ್ ಗಾರ್ಮೆಂಟ್ಸ್, ಬಿನಕನಹಳ್ಳಿ, ಟಿ. ನರಸೀಪುರ, ಮೈಸೂರು ಇವರಿಗೆ ಉತ್ತಮ ಉಡುಪುಗಳ ಪ್ರದರ್ಶನ ಹಾಗೂ ಮಾರಾಟಕ್ಕೆ ದ್ವಿತೀಯ ಬಹುಮಾನ ದೊರೆಯಿತು.

ಜವಳಿ ಮತ್ತು ಕೈಮಗ್ಗ ಇಲಾಖೆ ವಿಭಾಗದಲ್ಲಿ ಕೈಮಗ್ಗದಿಂದ ನೇಯ್ದ ಜವಳಿ ವಸ್ತುಗಳನ್ನು ಉತ್ಕೃಷ್ಟ ಮಟ್ಟದಲ್ಲಿ ವಿತರಿಸುವ ಮೂಲಕ ಜಿ.ಎಂ. ಸ್ವ-ಸಹಾಯ ಸಂಘ, ಮಾರ್ಟಹಳ್ಳಿ, ಕೊಳ್ಳೇಗಾಲ ಇವರು ಪ್ರಥಮ ಬಹುಮಾನ ಪಡೆದರೆ, ಪಟ್ಟಶಾಲೆ ಕೈಮಗ್ಗ ನೇಕಾರರ ಉತ್ಪಾದನೆ ಮತ್ತು ಮಾರಾಟ ಸಹಕಾರ ಸಂಘದವರು ದ್ವಿತೀಯ ಬಹುಮಾನವನ್ನು ಪಡೆದರು.

ವಾಣಿಜ್ಯ ಮಳಿಗೆಗಳ ವಿಭಾಗದಲ್ಲಿ ಸುವಾಸನೆಭರಿತ ಹಾಗೂ ಆರೋಗ್ಯಕರ ಸೋಪ್‌ಗಳನ್ನು ಮಾರಾಟ ಮಾಡುವ ಮೂಲಕ ಎಸ್.ಎಸ್.ಎಸ್. ಸೋಪ್ಸ್, ಬೆಂಗಳೂರು ಇವರು ಪ್ರಥಮ ಬಹುಮಾನವನ್ನು ಮುಡಿಗೇರಿಸಿಕೊಂಡರು. ಡಿಲೈಟ್ ಸೋಲಾರ್, ಮೈಸೂರು ಇವರು ಆಧುನಿಕ ಯುಗದಲ್ಲಿ ನಶಿಸುತ್ತಿರುವ ಸಂಪನ್ಮೂಲಗಳ ಉಳಿವಿಗಾಗಿ ಸೂರ್ಯರಶ್ಮಿಯಿಂದ ಹಲವಾರು ಉಪಯೋಗಗಳನ್ನು ಪಡೆಯುವ ಮಾಹಿತಿಗಳನ್ನು ನೀಡಿ ಸೋಲಾರ್ ಯಂತ್ರಗಳ ಮಾರಾಟದಿಂದ ಜನಜಾಗೃತಿ ಮೂಡಿಸಿ ದ್ವಿತೀಯ ಬಹುಮಾನ ಪಡೆದರು.

ಜೆಎಸ್‌ಎಸ್ ವಿಭಾಗದಲ್ಲಿ ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯ ಮೈಸೂರು ಪ್ರಥಮ, ಜೆಎಸ್‌ಎಸ್ ವಿಕಲಚೇತನರ ಪಾಲಿಟೆಕ್ನಿಕ್, ಮೈಸೂರು ದ್ವಿತೀಯ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯ ತೃತೀಯ ಹಾಗೂ ಜೆಎಸ್‌ಎಸ್ ಟೆರಾಕೋಟ, ಸುತ್ತೂರು ಶಾಲೆ ಇವರು ಸಮಾಧಾನಕರ ಬಹುಮಾನಗಳನ್ನು ತಮ್ಮದಾಗಿಸಿಕೊಂಡಿತು.

ಸರ್ಕಾರಿ ಸಂಸ್ಥೆಗಳ ವಿಭಾಗದಲ್ಲಿ ಕ್ಷೇತ್ರ ಸಂಪರ್ಕ ಕಾರ್ಯಾಲಯ, ಮೈಸೂರು (ವಾರ್ತಾ ಮತ್ತು ಪ್ರಸಾರ ಸಚಿವಾಲಯ, ಭಾರತ ಸರ್ಕಾರ) ಪ್ರಥಮ ಬಹುಮಾನ ಪಡೆದರೆ, ಫ್ಯಾಮಿಲಿ ಪ್ಲಾನಿಂಗ್ ಅಸೋಸಿಯೇಶನ್, ಮೈಸೂರು ಇವರು ದ್ವಿತೀಯ ಬಹುಮಾನ ಗಳಿಸಿದರು.

ವಿಶೇಷ ಬಹುಮಾನಗಳನ್ನು ಶ್ರೀ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ, ಮೈಸೂರು, ಪ್ರಾದೇಶಿಕ ಜನಸಂಪರ್ಕ ಕಾರ್ಯಾಲಯ ಬೆಂಗಳೂರು (ವಾರ್ತಾ ಮತ್ತು ಪ್ರಸಾರ ಸಚಿವಾಲಯ, ಭಾರತ ಸರ್ಕಾರ) ಹಾಗೂ ರಾಜ್ಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಮೈಸೂರು ಇವರು ಗಳಿಸಿದರು.

# ಶಿಸ್ತು ಮಸ್ತು ಜನಮನಗೆದ್ದ ವಸ್ತುಪ್ರದರ್ಶನ

**(2ನೇ ಪುಟದಿಂದ)**

ಸೂರಿನಡಿ ಸಮಾವೇಶಗೊಳಿಸಿ ಅವರ ಕಲಾಕೃತಿಗಳ ಪ್ರದರ್ಶನ ಮತ್ತು ಸ್ಥಳದಲ್ಲೆ ವ್ಯಕ್ತಿಗಳ ಭಾವಚಿತ್ರ ರಚಿಸಿ ಮಾರಾಟ ಮಾಡಲಾಯಿತು. ಈ ಚಿತ್ರಸಂತೆ ರಾಜ್ಯಮಟ್ಟದ್ದಾದರೂ ದೇಶದ ವಿವಿಧ ರಾಜ್ಯಗಳಾದ ಪಶ್ಚಿಮಬಂಗಾಳ, ಮದ್ಯಪ್ರದೇಶ, ಆಂಧ್ರ ಪ್ರದೇಶ, ತಮಿಳುನಾಡು, ಕೇರಳ, ಮಹಾರಾಷ್ಟ್ರ ಹಾಗೂ ನಮ್ಮ ರಾಜ್ಯದವರು ಸೇರಿ ಒಟ್ಟು 100 ಕಲಾವಿದರು ಭಾಗವಹಿಸಿ ವಾಟರ್ ಕಲರ್, ಆಯಿಲ್ ಪೇಯಿಂಟ್, ಅಕ್ರೆಲಿಕ್, ಪೆನ್ಸಿಲ್ ಮುಂತಾದವುಗಳಿಂದ ರಚಿಸಿದ ಸುಮಾರು 2000 ಕಲಾಕೃತಿಗಳು ಪ್ರದರ್ಶನಗೊಂಡಿದ್ದವು. ಇದಲ್ಲದೆ, ಬೆಂಗಳೂರಿನಿಂದ ಆಗಮಿಸಿದ್ದ, ಟೆರಕೋಟಾ ಕಲಾವಿದರು ಸುಂದರವಾದ ವಿವಿಧ ಆಕಾರಗಳಲ್ಲಿ ಮಕ್ಕಳ ಕೈಯಿಂದಲೇ ಸ್ಥಳದಲ್ಲಿ ಹೂಕುಂಡ ದೀಪ ಮುಂತಾದ ವಸ್ತುಗಳನ್ನು ತಯಾರಿಸಿಕೊಡುವ ದೃಶ್ಯ ಆಕರ್ಷಣೀಯವಾಗಿತ್ತು. ಇದಲ್ಲದೇ ಫೇಸ್ ಪೇಯಿಂಟಿಂಗ್ ಕಲಾವಿದರು ಮತ್ತು ಸ್ಥಳದಲ್ಲೆ ವ್ಯಕ್ತಿಗಳ/ಮಕ್ಕಳ ಭಾವಚಿತ್ರಗಳನ್ನು ಪೆನ್ಸಿಲ್‌ನಿಂದ 20–30 ನಿಮಿಷಗಳಲ್ಲಿ ರಚಿಸಿ ರೂ 50 ರಿಂದ 100 ರವರೆಗೆ ಮಾರಾಟ ಮಾಡುವ ದೃಶ್ಯ ಮನೋಹರ ಮತ್ತು ಕ್ರಿಯಾಶೀಲವಾಗಿತ್ತು.



ಜೆಎಸ್‌ಎಸ್ ಗ್ರಂಥಮಾಲೆ, ರಾಮಕೃಷ್ಣ ಆಶ್ರಮ, ವಿವೇಕ ಜಾಗೃತಿ ಬಳಗ, ಗುರು ಬಸವಣ್ಣ ಯೋಗ ಕಮ್ಮಟ, ವಿಶ್ವವಚನ ಫೌಂಡೇಶನ್, ಇವರುಗಳ ಆಧ್ಯಾತ್ಮಿಕ ಮತ್ತು ಧಾರ್ಮಿಕ ಗ್ರಂಥಗಳು, ರಾಮಕೃಷ್ಣ–ವಿವೇಕಾನಂದರ ವೇದಾಂತ ಸಾಹಿತ್ಯ, ಶರಣರ ವಚನ ಗ್ರಂಥ, ಶರಣರ ತತ್ವ ಚಿಂತನೆಗಳ ಪುಸ್ತಕಗಳ ಮಾರಾಟ ಮತ್ತು ಪ್ರದರ್ಶನವನ್ನು ಆಯೋಜಿಸಲಾಗಿತ್ತು. ಜೆಎಸ್‌ಎಸ್ ವಿವಾಹ ವೇದಿಕೆ ಹಾಗೂ ವೀರಶೈವ ಲಿಂಗಾಯತ ವಿವಾಹ ವೇದಿಕೆ ವತಿಯಿಂದ ನೋಂದಣಿ ಮಾಹಿತಿ ನೀಡಿದರು.


ಜೆಎಸ್‌ಎಸ್ ಶಾಲೆ ಸುತ್ತೂರು ಟೆರಾಕೋಟ ವಿಭಾಗದವರು ವಿವಿಧ ಮಾದರಿಗಳನ್ನು ಪ್ರಾತ್ಯಕ್ಷತೆಯ ಮೂಲಕ ಮಾಹಿತಿ ನೀಡಿ ಮಾರಾಟ ಮಾಡಿದರು. ಹಾಗೂ ಇತರ ಸಂಘ ಸಂಸ್ಥೆಗಳೂ ಭಾಗವಹಿಸಿ ತಮ್ಮ ಸೇವೆ ಮತ್ತು ಉತ್ಪನ್ನಗಳ ಬಗ್ಗೆ ವಸ್ತುಪ್ರದರ್ಶನಕ್ಕೆ ಭೇಟಿ ನೀಡುವ ಗ್ರಾಹಕರಿಗೆ ಪ್ರಚಾರಪಡಿಸುವುದರೊಂದಿಗೆ ಲಾಭದಾಯಕ ವಹಿವಾಟನ್ನು ನಡೆಸಿದರು.

ವಸ್ತುಪ್ರದರ್ಶನದ ಪ್ರಮುಖ ಆಕರ್ಷಣೆಯಾದ ಕೃಷಿ ಮೇಳವು ರೈತಾಪಿ ಜನರ ಮನಸೂರೆಗೊಂಡಿತು. ಸದರಿ ಆವರಣದಲ್ಲಿನ ರಂಗಮಂದಿರವು ಕಲಾರಸಿಕರ ಮನರಂಜಿಸಿತು. ಜೆಎಸ್‌ಎಸ್ ಅಂತರ ಶಾಲಾ–ಕಾಲೇಜುಗಳ ಸಾಂಸ್ಕೃತಿಕ ಸ್ಪರ್ಧೆ ಬೆಳಗ್ಗೆಯಿಂದ ಸಂಜೆಯವರೆಗೆ ಯುವ ಪೀಳಿಗೆ ಹಾಗೂ ಹಿರಿಯರ ಮನವನ್ನು ಸಮವಾಗಿ ಗೆದ್ದರೆ, ಸಂಜೆ ವಿವಿಧ ಸಂಸ್ಥೆಗಳ ಕಲಾತಂಡಗಳು ನೀಡಿದ ನೃತ್ಯ ಮತ್ತು ಕಲೆ ಪ್ರದರ್ಶನಗಳು ಕಿಕ್ಕಿರಿದು ನೆರೆದಿದ್ದ ಎಲ್ಲರ ಮನಸೂರೆಗೊಂಡವು.


ಪ್ರತಿದಿನವೂ ಸಹಸ್ರ ಸಹಸ್ರ ಸಂಖ್ಯೆಗಳಲ್ಲಿ ಕರ್ನಾಟಕದ ವಿವಿಧ ಜಿಲ್ಲೆಗಳು, ತಮಿಳುನಾಡು, ಕೇರಳ ಹಾಗೂ ಇತರ ರಾಜ್ಯಗಳಿಂದ ಭಕ್ತಾದಿಗಳು ಭೇಟಿ ನೀಡಿ ಪ್ರಯೋಜನ ಪಡೆದಿದ್ದಾರೆ. ಒಟ್ಟಾರೆ 2 ಲಕ್ಷಕ್ಕೂ ಹೆಚ್ಚು ಜನರು ವೀಕ್ಷಿಸಿದ ಈ ಸಾಲಿನ ವಸ್ತುಪ್ರದರ್ಶನವು ಪರಮಪೂಜ್ಯರ ಮಾರ್ಗದರ್ಶನದಲ್ಲಿ ಜಾತ್ರಾ ಸಮಿತಿಯ ಸಲಹೆ ಸಹಕಾರದೊಂದಿಗೆ ಅತ್ಯಂತ ಯಶಸ್ವಿಯಾಗಿ ನೆರವೇರಿತು. ಗ್ರಾಮಾಂತರ ಪ್ರದೇಶದಲ್ಲಿ ಸುತ್ತೂರು ಜಾತ್ರೆಯ ವಸ್ತುಪ್ರದರ್ಶನವು ವರ್ಷದಿಂದ ವರ್ಷಕ್ಕೆ ಬೆಳೆಯುತ್ತಿರುವುದು ಗಮನಾರ್ಹ ಹಾಗೂ ಪ್ರಶಂಸನೀಯ.

ವಸ್ತುಪ್ರದರ್ಶನದ ಯಶಸ್ಸಿಗೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಜಾತ್ರಾ ಮಹೋತ್ಸವ ಸಮಿತಿ ಮತ್ತು ವಸ್ತುಪ್ರದರ್ಶನ ಸಮಿತಿ ಪರವಾಗಿ ವಂದನೆಗಳು.


# ಸರ್ಕಾರದ ಯೋಜನೆಗಳು ಜನರಿಗೆ ತಲುಪುವಂತಾಗಬೇಕು



ಕೃಷಿಮೇಳ ಮತ್ತು ವಸ್ತುಪ್ರದರ್ಶನದ ಸಮಾರೋಪ ಸಮಾರಂಭದಲ್ಲಿ ಪಾಲ್ಗೊಂಡಿದ್ದ **ಡಾ. ಹೆಚ್.ಎನ್ ರವೀಂದ್ರರವರು** ಮಾತನಾಡಿ ಜಾತ್ರಾ ಮಹೋತ್ಸವಕ್ಕೆ ಇದು ನನ್ನ ಮೊದಲ ಭೇಟಿಯಾಗಿದೆ. ಭಾಷಣಕ್ಕಿಂತ ಹೆಚ್ಚಾಗಿ ಉತ್ತಮ ಕೆಲಸ ಮಾಡುವುದು ಇಂದು ಅವಶ್ಯಕವಾಗಿದೆ. ಜನರಲ್ಲಿ ಆರೋಗ್ಯದ ಬಗ್ಗೆ ಅರಿವಿರಬೇಕು. ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳು ಜಾರಿಗೆ ತಂದಿರುವ ಯೋಜನೆಗಳು ಸರಿಯಾದ ಮಾಹಿತಿಯಿಲ್ಲದೆ ಜನರನ್ನು ತಲುಪುತ್ತಿಲ್ಲ ಇದಕ್ಕೆ ನಿದರ್ಶನವೆಂಬಂತೆ ಆಯುಷ್ಮಾನ್ ಭಾರತ್ ಹಾಗೂ ಆರೋಗ್ಯ ಕರ್ನಾಟಕ ಎಂಬ ಈ ಎರಡು ಯೋಜನೆಗಳು ಇಂದು ವಿಫಲವಾಗಿವೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಸಂಪನ್ಮೂಲ ಕೊರತೆಯಿದ್ದು ಹೆರಿಗೆ ಮಾಡಿಸಲು ಬೇಕಾದ ವೈಜ್ಞಾನಿಕ ಸೌಲಭ್ಯಗಳಿಲ್ಲದೆ ಜನರು ಖಾಸಗಿ ಆಸ್ಪತ್ರೆಗಳಿಗೆ ಹೋಗುತ್ತಿದ್ದಾರೆ. ಇದರಿಂದ ಜನರಿಗೆ ಹೆಚ್ಚು ಹಣ ಖರ್ಚಾಗುತ್ತಿದೆ. ಸರ್ಕಾರದ ಯೋಜನೆಗಳು ನಾಮಕಾವಸ್ಥೆಯ ಯೋಜನೆಗಳಾಗಿ ಹೆಚ್ಚು ಜನರನ್ನು ತಲುಪುತ್ತಿಲ್ಲ. ಆಹಾರ ಮತ್ತು ಆರೋಗ್ಯಕ್ಕೆ ಸಂಬಂಧಪಟ್ಟ ವಿಷಯಗಳಿಗೆ ಜಿ.ಎಸ್.ಟಿ ಹಾಕುವುದು ನಿಲ್ಲಿಸಬೇಕು. ಸರ್ಕಾರದ ಕಾರ್ಯಕ್ರಮಗಳನ್ನು ಜಾರಿಗೊಳಿಸುವಲ್ಲಿ ಇರುವ ಸಮಸ್ಯೆಗಳನ್ನು ತ್ವರಿತವಾಗಿ ಬಗೆಹರಿಸಬೇಕು. ಸರ್ಕಾರದ ಯೋಜನೆಗಳು ಜನರಿಗೆ ತಲುಪುವಲ್ಲಿ ಸರ್ಕಾರಗಳು ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದರು. –ಅನುಷ.ಪಿ



ಬುಧವಾರ ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸಿದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮಿಗಳು



ಕ್ಲೇ ಮಾಡೆಲಿಂಗ್ ವಿಭಾಗದಲ್ಲಿ ಬಹುಮಾನ ಸ್ವೀಕರಿಸುತ್ತಿರುವ ವಿದ್ಯಾರ್ಥಿಗಳು ಮತ್ತು ತರಬೇತುದಾರರು

# ರೈತರು ಸ್ವಾವಲಂಬಿಗಳಾಗಿ ಬದುಕಲು ಪ್ರಯತ್ನಿಸಿ

ಕೃಷಿ ಮೇಳ ಮತ್ತು ವಸ್ತುಪ್ರದರ್ಶನ ಸಮಾರೋಪ ಸಮಾರಂಭಕ್ಕೆ ಆಗಮಿಸಿದ್ದ ಮಂಗಳೂರಿನ ಐಪಿಎಸ್ ಅಧಿಕಾರಿಗಳಾದ **ಡಾ. ವೇದಮೂರ್ತಿ ರವರು** ಮಾತನಾಡಿ ಶ್ರೀಕ್ಷೇತ್ರದಲ್ಲಿ ಭಕ್ತಿ ಶ್ರದ್ಧೆಗೆ ಪೂರಕವಾದ ಧಾರ್ಮಿಕ ವಾತಾವರಣವಿದೆ. ಮನಃಶಾಂತಿ, ನೆಮ್ಮದಿಗಾಗಿ ಪೊಲೀಸ್ ಇಲಾಖೆಯವರು ಶ್ರೀಕ್ಷೇತ್ರಕ್ಕೆ ಬರಲು ಬಯಸುತ್ತಾರೆ. ಪ್ರಕೃತಿ ವಿಕೋಪಗಳು, ರೈತರ ಆತ್ಮಹತ್ಯೆಗಳ ಕುರಿತು ತಮ್ಮ ದುಃಖವನ್ನು ವ್ಯಕ್ತಪಡಿಸಿದರು. ಈ ಜಾತ್ರೆಯು ರೈತರಿಗೆ, ಸಾರ್ವಜನಿಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಹೆಚ್ಚು ಪ್ರಯೋಜನಕಾರಿಯಾಗಿದೆ ಎಂದರು. ಮಳೆ ನೀರಿನ ಸಂರಕ್ಷಣೆ ಮಾಡುವುದರೊಂದಿಗೆ, ಸರ್ಕಾರದ ಸಹಾಯ ಬಯಸದೇ ರೈತರು ಸ್ವಾವಲಂಬಿಯಾಗಿ ಕೃಷಿಯಲ್ಲಿ ಯಶಸ್ಸುಗಳಿಸಲು ಪ್ರಯತ್ನಿಸಬೇಕೆಂದು ಅವರು ನುಡಿದರು.

–ಸಿ. ವಿನೋದ್

# ಜಾತ್ರೆಗೆ ಸಂಭ್ರಮದ ತೆರೆ

1ನೇ ಪುಟದಿಂದ

ಹಾಗೂ ಸರ್ಕಾರದ ವಿವಿಧ ಕೈಗಾರಿಕೆಗಳು, ರಾಜ್ಯದ ಕೈಮಗ್ಗ/ಜವಳಿ ನೇಕಾರರ ಸಹಕಾರ ಸಂಘಗಳು, ಮಹಿಳಾ ಅಭಿವೃದ್ಧಿ ನಿಗಮ ಮತ್ತು ನಬಾರ್ಡ್ ಪ್ರಾಯೋಜಿತ ಉದ್ಯಮಗಳು ಮತ್ತು ಖಾಸಗಿ ಸಹಭಾಗಿತ್ವದಲ್ಲಿ ಗೃಹೋಪಯೋಗಿ ವಸ್ತುಗಳ ಮಾರಾಟ ಮತ್ತು ವಸ್ತುಪ್ರದರ್ಶನ ಏರ್ಪಡಿಸಲಾಗಿತ್ತು. ಶೈಕ್ಷಣಿಕ ಹಾಗೂ ವಿಜ್ಞಾನ, ಆಹಾರ ಮತ್ತು ಪೌಷ್ಠಿಕತೆ, ಕೃಷಿ, ಸಾಮಾನ್ಯ ಸಮಾಜ ವಿಜ್ಞಾನ, ದೇಸಿ ಆಟಗಳು, ಸ್ವಚ್ಛಭಾರತ ಅಭಿಯಾನ, ನೀರಿನ ಸಂರಕ್ಷಣೆ ಕುರಿತು ಜನರಲ್ಲಿ ಅರಿವು ಮೂಡಿಸಲಾಯಿತು.

ಫೆ. 4ರಂದು ರೈತರ ಆದಾಯ ದ್ವಿಗುಣ –ಅವಕಾಶಗಳು ಹಾಗೂ ಸವಾಲುಗಳು ಎಂಬ ವಿಷಯದ ಜೊತೆ ಹವಾಮಾನ ಬದಲಾವಣೆ – ಮಾರುಕಟ್ಟೆ ಎಂಬ ವಿಷಯ ಕುರಿತು ಕೃಷಿ ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು.

ಫೆ.1ರಂದು ಉದ್ಘಾಟನೆಯಾದ ಕೃಷಿ ಮೇಳವು ಫೆ.6ರವರೆಗೆ ರೈತರಿಗೆ ಕೃಷಿ ಸಂಬಂಧಿಸಿದ ತಾಂತ್ರಿಕತೆಯ ಬಗ್ಗೆ, ಸಾವಯವ ಕೃಷಿ, ಹನಿ ನೀರಾವರಿ, ಪಶು ಸಂಗೋಪನೆ, ಆಹಾರಮೌಲ್ಯವರ್ಧನೆ, ಇದಕ್ಕೆ ಸಂಬಂಧಿಸಿದ ಹಾಗೆ ಪ್ರಾತ್ಯಕ್ಷಿಕೆಗಳ ಮೂಲಕ ಮಾಹಿತಿ ನೀಡಲಾಯಿತು.

ಮಕ್ಕಳಿಗೆ ಹಾಗೂ ಯುವ ಪೀಳಿಗೆಗೆ ಮನಸೆಳೆಯುವಂತಹ ಅಮ್ಯೂಸ್‌ಮೆಂಟ್ ಪಾರ್ಕ್ ನಿರ್ಮಿಸಲಾಗಿತ್ತು. ಕಪಿಲಾ ನದಿಯಲ್ಲಿ ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಸಹಯೋಗದೊಂದಿಗೆ ದೋಣಿ ವಿಹಾರ ಏರ್ಪಡಿಸಲಾಗಿತ್ತು.

1991 ರಿಂದ ಹಮ್ಮಿಕೊಂಡು ಬರುತ್ತಿರುವ ಭಜನಾ ಮೇಳವು ಈ ಬಾರಿ ದಾಖಲೆ ಪ್ರಮಾಣದಲ್ಲಿ 800 ತಂಡಗಳು ಭಾಗವಹಿಸಿ ನಾಲ್ಕು ದಿನಗಳ ಕಾಲ ಯಶಸ್ವಿಯಾಗಿ ನಡೆಯಿತು.

ಐವತ್ತೊಂದನೆಯ ದನಗಳ ಜಾತ್ರೆಯು ಫೆ. 3ರಂದು ಉದ್ಘಾಟನೆಯಾಯಿತು. ಮೂರು ದಿನಗಳು ನಡೆದ ಈ ದನಗಳ ಜಾತ್ರೆಯಲ್ಲಿ ಉತ್ತಮ ರಾಸುಗಳಿಗೆ ನಗದು ಬಹುಮಾನವನ್ನು ವಿತರಿಸಲಾಯಿತು.

ರಾಜ್ಯಮಟ್ಟದ ಚಿತ್ರಕಲಾ ಸ್ಪರ್ಧೆಯನ್ನು 1 ರಿಂದ 10ನೇ ತರಗತಿಯ ಶಾಲಾ ವಿದ್ಯಾರ್ಥಿಗಳಿಗಾಗಿ ಫೆ.3ರಂದು ಆಯೋಜಿಸಲಾಗಿತ್ತು.

ದೇಸಿ ಆಟಗಳನ್ನು ಸಂಸ್ಥೆಯ ಶಾಲಾ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದು, ಇವುಗಳಲ್ಲಿ ಕೆಸರುಗದ್ದೆ ಓಟ, ಗೋಲಿ, ಬುಗುರಿ, ನವಕಂಕರಿ, ಆಳಿಗುಳಿಮನೆ ಆಟ, ಹುಲಿ–ಕುರಿ, ಚೌಕಬಾರ, ಹಾವು–ಏಣಿ ಮತ್ತು ಚದುರಂಗ ಸ್ಪರ್ಧೆ ಗಳನ್ನು ಬಾಲಕಿಯರಿಗಾಗಿ ಏರ್ಪಡಿಸಲಾಗಿತ್ತು.

ಫೆ.5ರಂದು ನಡೆದ 39ನೇ ರಾಷ್ಟ್ರಮಟ್ಟದ ಕುಸ್ತಿ ಪಂದ್ಯಾವಳಿಯಲ್ಲಿ 50 ಜೊತೆ ನಾಡಕುಸ್ತಿ ಪಂದ್ಯಾವಳಿಯನ್ನು ಆಯೋಜಿಸಲಾಗಿತ್ತು.



ವಿಜೇತರಿಗೆ ಸುತ್ತೂರು ಕುಮಾರ ಪ್ರಶಸ್ತಿಯನ್ನು ನೀಡಲಾಯಿತು.

ಭಕ್ತಾದಿಗಳ ವಾಸ್ತವ್ಯಕ್ಕೆ ಶಾಶ್ವತ ವಸತಿ ವ್ಯವಸ್ಥೆಗಳ ಜೊತೆಗೆ ಸಾವಿರಾರು ಮಂದಿಗೆ ತಾತ್ಕಾಲಿಕ ವಸತಿ ವ್ಯವಸ್ಥೆಯನ್ನು ಕೂಡ ಕಲ್ಪಿಸಲಾಗಿತ್ತು. ಜಾತ್ರಾ ಮಹೋತ್ಸವದಲ್ಲಿ ಪ್ರತಿದಿನ ಬೆಳಗ್ಗೆ, ಮಧ್ಯಾಹ್ನ ಹಾಗೂ ರಾತ್ರಿ ವೇಳೆ ಪ್ರಸಾದದ ವ್ಯವಸ್ಥೆಯನ್ನು ಮಾಡಲಾಗಿತ್ತು. ಇದರೊಂದಿಗೆ ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸುವ ಭಕ್ತಾದಿಗಳು ಹಾಗೂ ಸಾರ್ವಜನಿಕರ ಅನುಕೂಲಕ್ಕಾಗಿ ಜಿಲ್ಲೆಯ ಮತ್ತು ತಾಲ್ಲೂಕು ಕೇಂದ್ರಗಳಿಂದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಿಂದ ಹಾಗೂ ಖಾಸಗಿಯವರಿಂದ ಸುತ್ತೂರಿಗೆ ವಿಶೇಷ ಬಸ್ಸುಗಳ ವ್ಯವಸ್ಥೆಯನ್ನು ಕಲ್ಪಿಸಲಾಗಿತ್ತು.

ಫೆ.6ರ ಬುಧವಾರ ಸಂಜೆ 6.30ಕ್ಕೆ ಕರ್ತೃಗದ್ದುಗೆಯಿಂದ ಶ್ರೀಮಠಕ್ಕೆ ಆದಿಜಗದ್ಗುರುಗಳವರ ಉತ್ಸವ ಮೂರ್ತಿಯನ್ನು ಬಿಜಯಂಗೈಸುವ ಮೂಲಕ ಈ ಬಾರಿಯ ಜಾತ್ರಾ ಮಹೋತ್ಸವ ಸಂಭ್ರಮದಿಂದ ಸಂಪನ್ನಗೊಂಡಿತು.

ಜಾತ್ರಾ ಮಹೋತ್ಸವದ ಎಲ್ಲಾ ಕಾರ್ಯಕ್ರಮಗಳಲ್ಲಿಯೂ ಲಕ್ಷಾಂತರ ಭಕ್ತಾದಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿ ಗುರುಕೃಪೆಗೆ ಪಾತ್ರರಾಗುವ ಮೂಲಕ ಜಾತ್ರೆಯನ್ನು ಯಶಸ್ವಿಗೊಳಿಸಿದರು.



ಬುಧವಾರ ಸಂಜೆ ಕರ್ತೃಗದ್ದುಗೆಯಿಂದ ಶ್ರೀಮಠಕ್ಕೆ ಆದಿಜಗದ್ಗುರುಗಳವರ ಉತ್ಸವಮೂರ್ತಿಯನ್ನು ಬಿಜಯಂಗೈಸುವ ಮೂಲಕ ಜಾತ್ರೆ ಸಂಪನ್ನಗೊಂಡಿತು

# ಮನುಷ್ಯ ಮನುಷ್ಯನಾಗಿ ಬದುಕಲು ಸಂಸ್ಕಾರವಿರಬೇಕು

ಕೃಷಿ ಮೇಳ ಮತ್ತು ವಸ್ತುಪ್ರದರ್ಶನ ಸಮಾರೋಪ ಸಮಾರಂಭದ ಸಮ್ಮುಖ ವಹಿಸಿದ್ದ ಗದಗ ಡಂಬಳ ಎಡೆಯೂರು ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠದ ಜಗದ್ಗುರು **ಡಾ. ಶ್ರೀ ತೋಂಟದ ಸಿದ್ಧರಾಮ ಮಹಾಸ್ವಾಮಿಗಳವರು** ಆಶೀರ್ವಚನ ನೀಡಿ, ಸುತ್ತೂರು ಜಾತ್ರೆ ಅತ್ಯಂತ ವೈಭವಪೂರ್ಣವಾಗಿ ನಡೆಯುತ್ತಿದೆ. ಮನಸ್ಸನ್ನು ನೈರ್ಮಲ್ಯಗೊಳಿಸುವಂತಹ ಜಾತ್ರೆ ಇದಾಗಿದೆ. ಹತ್ತೂರು ಜಾತ್ರೆ ನೋಡುವುದಕ್ಕಿಂತ ಸುತ್ತೂರು ಜಾತ್ರೆ ನೋಡಬೇಕು ಎಂಬ ಗಾದೆಯಿದೆ. ಅವಶ್ಯಕವಾದ ಜ್ಞಾನವನ್ನು ಸರ್ವರಿಗೂ ಕೊಡುವಂತಹ ಕಾರ್ಯ ಶ್ರೀಮಠದ್ದಾಗಿದೆ. ರೈತರಿಗೆ ಕೃಷಿಯ ಬಗ್ಗೆ ಹೆಚ್ಚಿನ ಜ್ಞಾನವನ್ನು ತಿಳಿಸುವಲ್ಲಿ ಜಾತ್ರೆ ದಾರಿದೀಪವಾಗಿದೆ. ಕೃಷಿಕರನ್ನು ಪ್ರೋತ್ಸಾಹಿಸಲು ಕೃಷಿಮೇಳ, ಮಕ್ಕಳನ್ನು ಪ್ರೋತ್ಸಾಹಿಸಲು ವಸ್ತುಪ್ರದರ್ಶನ ಸೇರಿದಂತೆ ಹಲವು ಸಾಂಸ್ಕೃತಿಕ



ಡಾ. ಶ್ರೀ ತೋಂಟದ ಸಿದ್ಧರಾಮ ಮಹಾಸ್ವಾಮಿಗಳು

ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರಲಾಗುತ್ತಿದೆ. ಎಲ್ಲಿ ನೋಡಿದರೂ ಸ್ವಚ್ಛತೆ ಎದ್ದು ಕಾಣುತ್ತದೆ. ಈ ಜಾತ್ರೆಯು ಉಳಿದೆಲ್ಲ ಜಾತ್ರೆಗಳಿಗೆ ಮಾದರಿಯಾಗಿದೆ. ಮನುಷ್ಯ ಮನುಷ್ಯನಾಗಿ ಬದುಕಬೇಕೆಂದರೆ ಸಂಸ್ಕಾರ ಜ್ಞಾನವಿರಬೇಕು. ಸಂಸ್ಕಾರವನ್ನು ತಿಳಿಸಲು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಶ್ರೀಮಠ ಮಾಡುತ್ತಿದೆ. ಧ್ಯಾನವೆಂಬ ಬೀಜವನ್ನು ಬಿತ್ತಿದಾಗ ಅಂತರಂಗದ ಆನಂದವೆಂಬ ಬೆಳೆ ಸಿಗುತ್ತದೆ. ಶರೀರದಲ್ಲಿ ಭವ (ಸಂಸಾರ) ಎಂಬ ಭರ (ಭಾರ) ಇದೆ. ಒಳ್ಳೆಯ ಬೆಳೆಯನ್ನು ಬೆಳೆದಾಗ ಭವ ಎಂಬ ಭರ ಓಡಿ ಹೋಗುತ್ತದೆ. ಕೃಷಿಯ ಬಗ್ಗೆ ಅನೇಕ ಮಾಹಿತಿಯನ್ನು ರೈತರಿಗೆ ತಿಳಿಸಲು ಶ್ರೀಮಠವು ವೈಚಾರಿಕ, ವೈಜ್ಞಾನಿಕ ಕಾರ್ಯಗಳನ್ನು ನಡೆಸುತ್ತಿದೆ. ಅದಕ್ಕಾಗಿ ಪೂಜ್ಯಶ್ರೀಗಳವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಎಂದು ನುಡಿದರು. – ಮಾನಸ ಬಿ.



ಅಷ್ಟೋತ್ತರ ಶತಕುಂಭೋತ್ಸವ... ಬುಧವಾರ ಕಪಿಲಾ ನದಿ ತೀರದಿಂದ ಕರ್ತೃಗದ್ದುಗೆಯತ್ತ ಹೆಜ್ಜೆಯಿತ್ತ ಸುಮಂಗಲೆಯರು

Printed by : Academy Newspapers Private Limited (Publishers of Star of Mysore and Mysooru Mithra)
15-C, Industrial 'A' Layout, Bannimantap, Mysore - 570 015